ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ. ವಿರೋಧಪಕ್ಷದ ನಾಯಕರಾದ ಶ್ರೀ ಡಿ.ಬಿ. ಚಂದ್ರೇಗೌಡರು ಚರ್ಚೆಯನ್ನು ಪ್ರಾರಂಭಿಸುತ್ತಾರೆ.

ನಿಯಮ ೬೮ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ಕರ್ನಾಟಕ ಮಿಲ್ಕ್ ಫೆಡರೇಷನ್ ಕಾರ್ಮಿಕರು ಹಾಗೂ ನೌಕರ ವರ್ಗದವರು ಸರ್ಕಾರಕ್ಕೆ ಮುಷ್ಕರದ ನೋಟೀಸ್ ಕೊಟ್ಟಿರುವುದರ ಬಗ್ಗೆ

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು).—ಸನ್ಮಾನ್ಯ ಸಭಾಧ್ಯಕ್ಷರೆ, ಬಹಳ ದಿವಸಗಳಿಂದ ಕರ್ನಾಟಕ ಮಿಲ್ಕ್ ಫೆಡರೇಷನ್ನಿನ ಅವ್ಯವಹಾರಗಳು ಮತ್ತು ಅದರಿಂದ ಆಗಿರತಕ್ಕ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿ ತಮ್ಮ ಅನುಮತಿಯನ್ನು ಕೇಳಿದ್ದೆವು. ಇಂದು ತಾವು ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಒಂದು ಕಾಲಕ್ಕೆ ಗ್ರೀನ್ ರೆವಲ್ಯೂಷನಿಂದ ವೈಟ್ ರೆವಲ್ಯೂಷನ್ನಿಗೆ ಹೋಗಬೇಕೆಂದು ಹೇಳಿ ಮಾಡಿದಂತಹ ಒಂದು ಪ್ರಯೋಗದ ಒಂದು ಭಾಗವಾಗಿ ಕರ್ನಾಟಕದಲ್ಲಿ, ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಹೇಳಿ ಒಂದು ಕಾಲಕ್ಕೆ ಆದಂತಹ ಕಾರ್ಪೊರೇಷನ್. ಆಮೇಲೆ ಕರ್ನಾಟಕ ಮಿಲ್ಕ್ ಫೆಡರೇಷನ್ ಎಂದು ಅದು ಪರಿವರ್ತನೆಯಾಗಿ ವಿವಿಧ ಜಿಲ್ಲೆಗಳಲ್ಲಿ ಕರ್ನಾಟಕ ಮಿಲ್ಕ್ ಯೂನಿಯನ್‌ಗಳ ಮೂಲಕ ಪ್ರತಿ ಜಿಲ್ಲೆಯಲ್ಲಿ ಕೆಲಸಕಾರ್ಯಗಳು ನಡೆಯುತ್ತಿವೆ. ಹಾಗೆಯೇ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಈ ಎರಡು ಜಿಲ್ಲೆಗಳಿಗೆ ಸೇರಿದಂತಹ ಒಂದು ಯೂನಿಯನ್‌ನನ್ನು ಬೆಂಗಳೂರು ಮಿಲ್ಕ್ ಫೆಡರೇಷನ್ ಯೂನಿಯನ್ ಎಂದು ಕರೆಯುತ್ತಿದ್ದೇವೆ. ಇದಕ್ಕೆ ಆಯ್ಕೆಯಾದಂತಹ ಫೆಡರೇಷನ್ನಿನ ಅಧ್ಯಕ್ಷರು ಇದ್ದಾರೆ. ಈ ಯೂನಿಯನ್‌ಗಳು ಕರ್ನಾಟಕ ಮಿಲ್ಕ್ ಫೆಡರೇಷನ್ನಿನ ಸದಸ್ಯರಾಗಿ ರಾಜ್ಯದ ಮಟ್ಟಿಗೆ ಒಂದು ಫೆಡರೇಷನ್ನನ್ನು ರಚನೆ ಮಾಡಿಕೊಂಡು ಕೆಲಸ ಮಾಡುತ್ತಿದ್ದಾರೆ. ಬೆಂಗಳೂರು ಮಿಲ್ಕ್ ಫೆಡರೇಷನ್‌ಗೆ ಸೇರಿದ ಹಾಗೆ ಅರ್ಬನ್ ಅಂಡ್ ರೂರಲ್ ಡಿಸ್ಟ್ರಿಕ್ಟ್ ಕೋ-ಆಪರೇಟೀವ್ ಮಿಲ್ಕ್ ಫೆಡರೇಷನ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರ್ ಆಗಿ ಸುಮಾರು ಒಂದು ವರ್ಷಕ್ಕೆ ೮೦-೯೦ ಕೋಟಿ ರೂ.ಗಳಷ್ಟು ವ್ಯವಹಾರಗಳನ್ನು ಮಾಡುತ್ತಾರೆ. ಇದರ ಆಶ್ರಯದಲ್ಲಿ ಸುಮಾರು ೬೦೦ ಸೊಸೈಟಿಗಳು ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿವೆ. ಸುಮಾರು ೧೨೦೦೦ಕ್ಕೂ ಹೆಚ್ಚು ಜನರು ಇಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ಅಂತೆಯೇ ಬೆಂಗಳೂರು ನಗರದ ಸುಮಾರು ೫೦ ಲಕ್ಷ ಜನರಿಗೆ ಹಾಲನ್ನು ಇದರ ಮೂಲಕ ಒದಗಿಸುತ್ತಾರೆ. ಮೇಲಾಗಿ ಲಕ್ಷಾಂತರ ಜನ ರೈತರು ಈ ಹಾಲನ್ನು ಮಿಲ್ಕ್ ಯೂನಿಯನ್‌ಗಳ ಮೂಲಕ ಬೆಂಗಳೂರು ನಗರದ ನಾಗರೀಕರಿಗೆ ಮತ್ತು ಇನ್ನಿತರರಿಗೆ ಒದಗಿಸುತ್ತಾರೆ. ಆದುದರಿಂದ ಇದರ ಉತ್ಪಾದಕರು ನೇರವಾಗಿ ರೈತರು ಗ್ರಾಮಾಂತರ ಪ್ರದೇಶಗಳಿಂದ ಬರುವ ಈ ಹಾಲನ್ನು ಬಳಕೆ ಮಾಡತಕ್ಕಂಥವರು ಬೆಂಗಳೂರಿನ ನಾಗರೀಕರು. ಈ ಸಂಸ್ಥೆಯು ನಡೆಯುತಕ್ಕಂಥಾದ್ದು ಸಹಕಾರಿ ಶಾಸನದ ಪ್ರಕಾರ. ಇದು ಇತ್ತೀಚಿನವರೆಗೆ ನಡೆದುಕೊಂಡು ಬಂದಿತ್ತು. ಆದರೆ ಕೆಎಂಎಫ್‌ಗೆ ಎಂ.ಡಿ. ಇಲ್ಲ ಎಂದು ಪದೇ ಪದೇ ನೌಕರರು ಒತ್ತಾಯ ಮಾಡಿಕೊಂಡು ಬಂದರು. ಅದು ಈ ದಿವಸದ ಪತ್ರಿಕೆಗಳಲ್ಲಿಯೂ ಬಂದಿದೆ. ಇವರು ಮಾನ್ಯ ಮುಖ್ಯಮಂತ್ರಿಯವರನ್ನು ನೋಡುವುದಕ್ಕೂ ಪ್ರಯತ್ನ ಮಾಡಿದರು. It is appeared in Decan Herald dated July 11th.

"New MD for KMF soon

The KMF Employees Federation has quoted that the Chief Minister Veerendra Patil assured them through his Secretary that the State Government would appoint a Managing Director to the Karnataka Milk Federation before July 15."

ನಾನು ಕೆಎಂಎಫ್‌ನ ಎಂ.ಡಿ.ಗೂ ಮತ್ತು ಬೆಂಗಳೂರು ಅರ್ಬನ್ ಅಂಡ್ ರೂರಲ್ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಮಿಲ್ಕ್ ಫೆಡರೇಶನ್‌ಗೂ ಇರುವ ಸಂಬಂಧವನ್ನು ಹೇಳುವುದಕ್ಕಾಗಿ ಈ ಹಿನ್ನೆಲೆ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಯನ್ನು ಹೇಳಬೇಕಾಯಿತು. ಈ ಹೊಸ ಸರಕಾರ ಬಂದಮೇಲೆ, ಸನ್ಮಾನ್ಯ ಸಚಿವರು ಹಳೆಯ ಎಂ.ಡಿ.ಯನ್ನು ತೆಗೆದು ಹೊಸ ಡೈರೆಕ್ಟರ್‌ರನ್ನು ಆ ಜಾಗದಲ್ಲಿ ನೇಮಿಸುವಂಥ ಒಂದು ಪ್ರಯತ್ನವನ್ನು ಮಾಡಿದರು. ಒಂದು ವೇಳೆ ಅವರಿಗೆ ಅಧಿಕಾರ ಇದ್ದರೆ ಹೀಗೆ ಮಾಡಬಾರದು ಎಂದು ನಾನು ಹೇಳುವುದಿಲ್ಲ. ಖಂಡಿತವಾಗಿಯೂ ತಮಗೆ ಅಧಿಕಾರ ಇದ್ದರೆ ಮಾಡಿ. ಆದರೆ ಯಾವುದೇ ಮಂತ್ರಿಗಳು ತನ್ನ ಅಧಿಕಾರದ ವ್ಯಾಪ್ತಿಯನ್ನು ಮೀರಿ, ಶಾಸನಬದ್ಧವಾಗಿ ಆಯ್ಕೆಯಾದಂಥ ಯಾವುದೇ ಸಂಸ್ಥೆಯ ಮೇಲೆ ಈ ರೀತಿಯ ಒಂದು ಅಧಿಕಾರವನ್ನು ಹೇರತಕ್ಕಂಥ ಪ್ರಯತ್ನವನ್ನು ಮಾಡಿದಾಗ ಸಹಜವಾಗಿಯೇ ಅಲ್ಲಿ ಪ್ರತಿಕ್ರಿಯೆ ಮತ್ತು ಪ್ರತಿಕೂಲ ಕಂಡುಬರುತ್ತದೆ. ಇಂಥ ಒಂದು ಪರಿಸ್ಥಿತಿಯನ್ನು ನಮ್ಮ ಸನ್ಮಾನ್ಯ ಮಂತ್ರಿಯವರು ನಿರ್ಮಾಣ ಮಾಡಿದರು. ಚುನಾಯಿತ ಬೆಂಗಳೂರು ಅರ್ಬನ್ ಅಂಡ್ ರೂರಲ್ ಡಿಸ್ಟ್ರಿಕ್ಟ್ ಕೋ-ಆಪರೇಟೀವ್ ಮಿಲ್ಕ್ ಫೆಡರೇಶನ್‌ನವರು ಅವರ ಕಾರ್ಯಕಾರಿ ಸಮಿತಿಯಲ್ಲಿ ಮತ್ತು ಕೆಎಂಎಫ್‌ನವರು ಅವರ ಕಾರ್ಯಕಾರಿ ಸಮಿತಿಯಲ್ಲಿ ಹಾಗೂ ಕೇಂದ್ರದ ಡೈರಿ ಡವಲಪ್‌ಮೆಂಟ್ ಕಾರ್ಪೊರೇಷನ್‌ನವರು ಕೂಡ ಇದರಲ್ಲಿ ಸರಕಾರದವರು ಯಾವ ರೀತಿಯಲ್ಲೂ ಪ್ರವೇಶ ಮಾಡಬಾರದೆಂಬ ನಿಯಮವನ್ನು ಸರಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದರು. ಆದರೆ ಏಕೆ ಎಂದು ಗೊತ್ತಿಲ್ಲ, ಅವರನ್ನೇ ಹಾಕಬೇಕೆಂದು ಸ್ವಲ್ಪಮಟ್ಟಿಗೆ ಹಠ ಮಾಡಿ ಅವರನ್ನೇ ಹಾಕಿದರು. ಸರಕಾರದವರು ಮಾಡಿದ್ದನ್ನು ಸರಿಯಿಲ್ಲ ಎಂದು ತಿಳಿಸಿಹೇಳುವುದಕ್ಕೆ ತಮ್ಮ ಶಾಸನಬದ್ಧವಾದಂಥ ಒಂದು ಅಧಿಕಾರವನ್ನು ಬಳಸಿ ಮಂತ್ರಿಗಳವರಿಗೆ ತಿಳಿಸಿ ಹೇಳಲು ಪ್ರಯತ್ನ ಮಾಡಿದರು. ಇದೂ ಸಾಧ್ಯವಾಗಲಿಲ್ಲ ಎಂದು ಕಂಡಾಗ ಅವರು ಉಳಿದ ಮಾರ್ಗವನ್ನು ಹುಡುಕಲು ಪ್ರಯತ್ನ ಮಾಡಿದರು. ಏತನ್ಮಧ್ಯೆ ಈ ಅಧಿಕಾರ ತನಗಿಲ್ಲ ಎಂದು ಸರಕಾರಕ್ಕೆ ಗೊತ್ತಾದ ತಕ್ಷಣವೇ ೨೧ನೇ ಜೂನ್, ೧೯೯೦ರಲ್ಲಿ ಒಂದು ಮತ್ತು ಅದಕ್ಕಿಂತ ಪೂರ್ವಭಾವಿಯಾಗಿ ೨೨ನೇ ಮೇ, ೧೯೯೦ಕ್ಕೆ ಒಂದು ಹೀಗೆ ಎರಡು ಭಾರಿ ಈ ಒಂದು ಅಧಿಕಾರವನ್ನು ತೆಗೆದುಕೊಳ್ಳತಕ್ಕಂಥ ಪ್ರಯತ್ನವನ್ನು ಸರಕಾರ ಮಾಡಿತು. ಇಷ್ಟೊಂದು ಹಠ ಸರ್ಕಾರಕ್ಕೆ ಏತಕ್ಕೆ ಇದೆ ಎಂಬುದು ನನಗೆ ಗೊತ್ತಾಗಲಿಲ್ಲ. ನೀವು ಮೊದಲನೇ ಅಧಿಕಾರವನ್ನು ತೆಗೆದುಕೊಂಡಿದ್ದು Notification No. CMW 57 CLM 90 Bangalore Dt. 22nd May, 1990. ಆಗ ಸೀಮಿತವಾದಂಥ ಅಧಿಕಾರವನ್ನು ತೆಗೆದುಕೊಂಡರು.

> "In exercise of the powers conferred under Section 54 of the Karnataka Co-operative Societies Act. 1959 (Karnataka Act 11 of 1959) the Government of Karnataka hereby take power to exercise control over the conduct of business of the Karnataka Milk Federation in so far as the matter relating to the transfer of the managing directors of the district milk unions is concerned."

ಶ್ರೀ ಬಿ. ಬಸವಲಿಂಗಪ್ಪ (ಪಶುಸಂಗೋಪನ ಸಚಿವರು).—ಇವತ್ತು ಸಭೆಯ ಮುಂದಿರುವ ವಿಷಯ ಕರ್ನಾಟಕ ಮಿಲ್ಕ್ ಫೆಡರೇಷನ್ ಕಾರ್ಮಿಕರು ಹಾಗೂ ನೌಕರ ವರ್ಗದವರು ಸರ್ಕಾರಕ್ಕೆ ಮುಷ್ಕರದ ಬಗ್ಗೆ ನೋಟೀಸ್ ಕೊಟ್ಟಿರುವ ಬಗ್ಗೆ ಚರ್ಚಿಸುವುದು. ಆದರೆ ವಿರೋಧಪಕ್ಷದ ನಾಯಕರು ಆ ಯೂನಿಯನ್‌ಗೆ ಸೇರಿದ ಎಂ.ಡಿ. ಚೇಂಜ್ ಮಾಡಿದ್ದು, ಇನ್ನೊಬ್ಬರನ್ನು ತೆಗೆದದ್ದು, ಹಾಗೂ ವರ್ಗಾವಣೆ ಮಾಡತಕ್ಕದ್ದರ ಬಗ್ಗೆ ಚರ್ಚೆ ಮಾಡುವುದಾದರೆ ನನಗೆ ವಿಶೇಷವಾದ ಅವಕಾಶ ಕೊಡಬೇಕು. ಅಡ್ಮಿನಿಸ್ಟ್ರೇಟಿವ್ ಹೆಡ್ ಸರ್ಕಾರ ಇರುವುದರಿಂದ ನಾವು ಅದರ ಹಿತರಕ್ಷಣೆ ಮಾಡಲೇಬೇಕು. ಅಲ್ಲಿ ಅವ್ಯವಹಾರ ನಡೆಯುತ್ತದೆ, ಅಲ್ಲಿ ಯಾವರೀತಿ ಅದನ್ನು ತಡೆಹಿಡಿಯಬೇಕೆಂಬ ಬಗ್ಗೆ ಕೋ-ಆಪರೇಟಿವ್ ಆಕ್ಟ್‌ನಲ್ಲಿ ಬಹಳ ಅವಕಾಶಗಳಿವೆ. ಈ ಬಗ್ಗೆ ನಾಳೆ ನಮ್ಮ ಇಲಾಖೆ ಬೇಡಿಕೆಗಳು ಬಂದಾಗ ತಾವು ವಿವರವಾಗಿ ಮಾತನಾಡಬಹುದು. ಆದರೆ ಈಗ ತಾವು ಕೊಟ್ಟಿರುವ ನೋಟೀಸ್ ಬಗ್ಗೆ ಮಾತ್ರ ಮಾತನಾಡಿದರೆ ಚೆನ್ನಾಗಿರುತ್ತದೆ.

SRI D.B. CHANDREGOWDA.—The circumstances led to the strike ಅವ್ಯವಹಾರ ನಡೆದಿದ್ದರೆ ಆಡಳಿತದ ಮುಖ್ಯಸ್ಥರು ಪ್ರವೇಶ ಮಾಡಬಾರದೆಂದು ನಾನು ಹೇಳಲಿಲ್ಲ, ಆದರೆ ಸುವ್ಯವಹಾರ ನಡೆದಾಗ ಅಲ್ಲಿ ತಾವು ತಲೆಹಾಕಬೇಡಿ ಎಂದು ನಾನು ಅಷ್ಟೇ ಹೇಳುತ್ತೇನೆ. ಅಲ್ಲಿ ಏನು ಸುವ್ಯವಹಾರ ನಡೆಯುತ್ತದೆ ಎಂಬುದನ್ನು ನಾನು ಮುಂದೆ ಹೇಳುತ್ತೇನೆ ಮೇ ೨೨ನೇ ತಾರೀಖಿ ಒಂದು ಅಧಿಕಾರ ತೆಗೆದುಕೊಂಡಿರಿ. ಇದು ನಿಮಗೆ ಸಾಕಾಗಲಿಲ್ಲ. ನೀವು ಹೇಳುವಂತೆ ಈ ಎಲ್ಲ ಅಧಿಕಾರ ನಿಮಗೆ ಇದ್ದಿದ್ದರೆ ಈ ಅಧಿಕಾರ ಏಕೆ ತೆಗೆದುಕೊಂಡಿರಿ ?

ಶ್ರೀ ಬಿ. ಬಸವಲಿಂಗಪ್ಪ. —ಅದು ಕೋರ್ಟ್‌ನಲ್ಲಿದೆ. ದಯವಿಟ್ಟು ಸ್ಟೈಕ್ ಬಗ್ಗೆ ಮಾತನಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ,—ಇದು ಸಾಲದು ಎಂಬಂತೆ ಮತ್ತೆ ಜೂನ್ ೨೧ನೇ ತಾರೀಖು ಮತ್ತೊಂದು ಅಧಿಕಾರ ಪಡೆದುಕೊಂಡಿರಿ. ಆ ಅಧಿಕಾರ ಏನೆಂದರೆ,

> "In notification No. CMW 57 CNM 90 dated 22nd May, 1990 published in *Extraordinary Gazette*, Part–IV, the following shall be included at the end..."
>
> "The Department of Animal Husbandry, Fisheries and Forest which is the administrative department shall exercise powers from the date of publication of the notification in the *Official Gazette*."

SRI B BASAVALINGAPPA.—If hon'ble member here to yield for a minute. Extraordinary notification issued under Section 54 of the Co-operative Societies Act has been challenged and a stay order has been given by the High Court. It is pending before the High Court. It becomes sub-judice.

ಶ್ರೀ ಡಿ.ಬಿ. ಚಂದ್ರೇಗೌಡ.—ನನಗೆ ಪೂರ್ತಿ ಹೇಳಲು ಬಿಟ್ಟು ಬಿಟ್ಟರೆ ತಮಗೇ ಅನುಕೂಲವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಆಯಿತು.

ಶ್ರೀ ಡಿ.ಬಿ. ಚಂದ್ರೇಗೌಡ.—ನಾನು ಬಾಕಿ ವಿಚಾರಗಳನ್ನು ಹೇಳುವುದೇ ಇಲ್ಲ. ಇವು ಎರಡು ಆರ್ಡರ್‌ಗಳು ಆದವು. ಈ ಎರಡು ಆರ್ಡರ್‌ಗಳನ್ನು ಪ್ರಶ್ನೆ ಮಾಡಿ, High Court of

Karnataka at Bangalore, Writ petition No. 13781/90 to 85/90, Petitioner J.Madhavaswamy and others, versus State of Karnataka. ಒಂದು ರಿಟ್ ಪಿಟಿಷನನ್ನು ಹಾಕಿದರು. I will quote the order of the High Court. Beyond that I will not go.

> "The High Court by its order dated 27–6–90 stays the operation of your notification dated 22/5/1990 and addendum dated 21/6/1990 in No. CMW 57..."

ಹೈಕೋರ್ಟ್ ಸ್ಟೇ ಕೊಟ್ಟಮೇಲೆ ನಿಮ್ಮ ಹಿಂದಿನ ಎರಡು ಆಜ್ಞೆಗಳು ಜಾರಿಯಲ್ಲಿ ಇಲ್ಲ ಎನ್ನತಕ್ಕಂಥದ್ದು ತೀರ್ಮಾನವಾಯಿತು. ಆದರ ಅರ್ಥ ನಿವ ಗೆ ಮ್ಯಾನೇಜಿಂಗ್ ಡೈರೆಕ್ಟರನ್ನು ಹಾಕುವುದಾಗಲಿ ಅಥವಾ ಅಲ್ಲಿಯ ಆಡಳಿತದಲ್ಲಿ ಪ್ರವೇಶ ಮಾಡುವುದಕ್ಕಾಗಲಿ ಅವಕಾಶ ಇಲ್ಲ ಎನ್ನತಕ್ಕಂಥದ್ದು ಇದರ ಆದೇಶ. ಇವೆರಡೂ ಆದೇಶವನ್ನು ಸ್ಟೇ ಮಾಡಿದವೆ ಲೆ ಏನಾಯಿತು ? ಹೈಕೋರ್ಟ್ ಆಜ್ಞೆ ಏನು ? ಕನಿಷ್ಟ ಪಕ್ಷ ತಾವು ಹಾಕಿದಂಥ ಮ್ಯಾನೇಜಿಂಗ್ ಡೈರೆಕ್ಟರ್ ಸ್ಟೇ ಆರ್ಡರ್ ತೆಗೆದುಕೊಂಡಿದ್ದೀರಲ್ಲಾ. ಅದನ್ನಾದರೂ ವೆಕೇಟ್ ಮಾಡಿಸುವುದಕ್ಕೆ ಪ್ರಯತ್ನ ಮಾಡಿದಿರಾ ? ಮಾಡುವುದಕ್ಕೆ ಸಾಧ್ಯವಿಲ್ಲ. ಕಾರಣವೇನು ? ಕೆ.ಎಂ.ಎಫ್.ನಲ್ಲಿ ಮ್ಯಾನೇಜಿಂಗ್ ಡೈರೆಕ್ಟರೇ ಇಲ್ಲ. ಕರ್ನಾಟಕ ವಿಲ್ಕ್ ಫೆಡರೇಷನ್‌ನಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಇಲ್ಲ, ಇದ್ದವರನ್ನು ಸಸ್ಪೆಂಡ್ ಮಾಡಿದ್ದೀರಿ. ನಾನು ಆ ಪ್ರಶ್ನೆಗೆ ಹೋಗುವುದಿಲ್ಲ. ಇದು ಒಂದು ಭಾಗ. ಈ ಒಂದು ರೆಸಿಸ್ಟೆನ್ಸ್ ಏನು ಇತ್ತು, ಆವರನ್ನು ಹಾಕ ತಕ್ಕಂಥದ್ದು ಬೇಡ ? ಕಾರಣವೇನು ? ಹಿಂದಿನ ಎಂ.ಡಿ. ಬಗ್ಗೆ ಏನು ಅವ್ಯವಹಾರ ಇತ್ತು ? ಅವ್ಯವಹಾರ ಏನು ನಡೆದಿತ್ತು ? ಅದಕ್ಕೆ ಕಾರಣ ಇರಬೇಕು. ೧ ಕೋಟಿ ೨೯ ಲಕ್ಷ ರೂಪಾಯಿ ಲಾಭ ಮಾಡಿದ್ದು ಅವ್ಯವಹಾರವೇ ? ಅಥವಾ ೧ ಲಕ್ಷ ಐವತ್ತು ಲಕ್ಷ ಲೀಟರ್ ಕೆಪಾಸಿಟಿ ಬೆಂಗಳೂರು

ಡೈರಿಗೆ ಇದ್ದುದ್ದನ್ನು ಮೂರು ಲಕ್ಷ ಲೀಟರ್‌ಗೆ ಅಂದರೆ ತನ್ನ ಕೆಪಾಸಿಟಿಯ ಎರಡರಷ್ಟು ತಂದು ಮಾರಿದ್ದು ಅವ್ಯವಹಾರವೇ ? ಅಥವಾ ೧೨೦೦ ಜನ ನೌಕರರು, ಕೆಲಸ ಮಾಡುತ್ತಿದ್ದ ವಿಂಲ್ಕ್ ಫೆಡರೇಷನ್‌ನಲ್ಲಿ ಕಾರ್ಮಿಕರಿಗೂ ಮತ್ತು ಮ್ಯಾನೇಜ್‌ಮೆಂಟಿಗೂ ಒಳ್ಳೆಯ ಸಂಬಂಧವನ್ನು ಕಲ್ಪಿಸಿಕೊಂಡು ಡೈರಿಯಲ್ಲಿ ೧ಕೋಟಿ ೨೯ ಲಕ್ಷ ರೂಪಾಯಿ ಲಾಭ ಬರುವಂತೆ ವ್ಯವಸ್ಥೆ ಮಾಡಿದ್ದು ಅವ್ಯವಹಾರವೇ ? ಅಥವಾ ಹೊಸ ಮ್ಯಾನೇಜಿಂಗ್ ಡೈರೆಕ್ಟರ್ ಬಂದಮೇಲೆ ಈ ಆರು ತಿಂಗಳಲ್ಲಿ ಸರಿ ಸುಮಾರು ನನ್ನ ಅಂದಾಜಿಗೆ ೩೦ ಲಕ್ಷ ರೂಪಾಯಿ ಲುಕ್ಸಾನಿಗೆ ಬಂದಿದೆಯಲ್ಲಾ ಇದು ಅವ್ಯವಹಾರವೇ ? ಬೋರ್ಡ್ ಆಫ್ ಡೈರೆಕ್ಟರ್ಸ್ ಮಾಡಿದಂಥ ತೀರ್ಮಾನ ಅಂದರೆ ಇಂತಿಂಥ ಬ್ಯಾಂಕ್‌ಗಳಲ್ಲಿ ಇಷ್ಟು ದುಡ್ಡನ್ನು ಇಡಬೇಕು ಎಂದು ಏನು ಬೋರ್ಡ್ ಆಫ್ ಡೈರೆಕ್ಟರ್ಸ್ ತೀರ್ಮಾನವನ್ನು ಮಾಡಿದ್ದರು, ಆ ಬ್ಯಾಂಕ್‌ಗಳನ್ನು ಬಿಟ್ಟು ಸುಮಾರು ೨೨ ಲಕ್ಷ ರೂಪಾಯಿಗಳನ್ನು ಬೋರ್ಡ್ ಆಫ್ ಡೈರೆಕ್ಟರ್ಸ್ ಮಾಡಿದ ತೀರ್ಮಾನ ವಿರುದ್ಧ ಬೇರೆ ಬ್ಯಾಂಕ್‌ಗಳಲ್ಲಿ ಡಿಪಾಸಿಟ್ ಇಟ್ಟಿದ್ದು ಅವ್ಯವಹಾರವೇ ಅಥವಾ ಈ ಬೆಂಗಳೂರು ಡೈರಿ ಡೆವೆಲಪ್‌ಮೆಂಟ್ ಕಾರ್ಪೊರೇಷನ್‌ಗೆ ಬೇಕಾಗಿರತಕ್ಕಂಥ ಕ್ಯಾನ್‌ಗಳನ್ನು ೪೩೦ ರೂಪಾಯಿಗೆ ಕೊಡುತ್ತೇವೆಂದು ಹೇಳಿ ಕೇಂದ್ರದ ಸಿ.ಡಿ.ಡಿ.ಪಿ. ಅವರು ಬರೆದರೆ ಇಲ್ಲಿ ಅದನ್ನು ಬಿಟ್ಟು ೮೦೦ ಚಿಲ್ಲರೆ ರೂಪಾಯಿಗಳನ್ನು ಕೊಟ್ಟು ೨೦೦–೩೦೦ ಕ್ಯಾನ್‌ಗಳು ಸಾಕು ಎಂದು ಹೇಳಿದರೂ ಸಹ ಎರಡು ಸಾವಿರ ಕ್ಯಾನ್‌ಗಳನ್ನು ತೆಗೆದುಕೊಂಡಿರತಕ್ಕಂಥದ್ದು ಬೋರ್ಡ್ ತೀರ್ಮಾನದ ವಿರುದ್ಧ ಇದು ಅವ್ಯವಹಾರವೇ ಎಂಬುದು ಈಗ ತೀರ್ಮಾನವಾಗಬೇಕು. ಇದು ನಡೆದಿಲ್ಲ ಎನ್ನುವುದಾದರೆ ತಾವು ಬೇಕಾದರೆ ತೆಗೆಸಿ ನೋಡಿ. ಬ್ಯಾಂಕ್ ಅಕೌಂಟ್ ಕೊಡುತ್ತೇನೆ. ಯಾವ ಯಾವ ಬ್ಯಾಂಕ್‌ನಲ್ಲಿ ಎಷ್ಟೆಷ್ಟು ದುಡ್ಡನ್ನು ಇಟ್ಟಿದ್ದಾರೆ ಎಂದು ತಮಗೆ ವಿವರ ಬೇಕಾದರೆ ಕೊಡುತ್ತೇನೆ. What is the decision of the Board ? That all the deposits should be made in four nationalised banks in addition to cooperative banks. The Nationalised Banks are, State Bank of Mysore, Syndicate Bank, Canara Bank and State Bank of India. On 24.1 90 under Sl.No. 7256 Vysya Bank Rs. 10 lakhs.cheque No. 12170. under Sl.No, 7255 on 24.3.90 Syndicate Bank Gandhinagar under cheque No. 12171 Rs. 5 lakhs and on 7-2-90 and 28-3-90, Bank of Maharastra, 19724 Rs. 2 lakht each and under Sl.No. 7329 in State Bank of Travancore Rs. 5 lakhs.

ಶ್ರೀ ಬಿ. ಬಸವಲಿಂಗಪ್ಪ.—ಇಟ್ಟರೆ ಏನಾಯಿತು ?

ಶ್ರೀ ಡಿ. ಬಿ. ಚಂದ್ರೇಗೌಡ.—ಯಾವ ಬ್ಯಾಂಕಿನಲ್ಲಿ ಇಡಬೇಕೆಂದು ಬೋರ್ಡ್ ಆಫ್ ಡೈರೆಕ್ಟರ್ಸ್ ತೀರ್ಮಾನ ಮಾಡಿದ್ದರೋ, ಅದರ ವಿರುದ್ಧ ಮ್ಯಾನೇಜಿಂಗ್ ಡೈರೆಕ್ಟರ್ ಇಟ್ಟರೆ ಏನು ಆಗುವುದಿಲ್ಲವೇ ? ಇದರ ಅರ್ಥ ಏನು ? ಏನಾಗುತ್ತದೆಂಬುದನ್ನು ದಯವಿಟ್ಟು ತಾವೇ ಹೇಳಿ. ಇದರ ಜೊತೆಗೆ ಕಳೆದ ೬ ತಿಂಗಳಲ್ಲಿ. ಹಿಂದೆ ಕೆ.ಡಿ.ಡಿ.ಪಿ.ಗೆ ೧೯೭೮ರಲ್ಲಿ ೩೦ ಎಕರೆ ಜಾಗ ಕೊಟ್ಟಿದ್ದರು. ಇವು ಇವರ ಆಸ್ತಿ ಏನು ಅವ್ಯವಹಾರ ನಡೆದಿದೆ ಎಂದು ಹೇಳುತ್ತೇನೆ. Declaration under Sec.6 read with Sec.17(1) under Land Acquisition Act, ಸುಮಾರು ೩೦ ಎಕರೆ ಜಮೀನಿನ ಆಸ್ತಿ. ನಾಗಶೆಟ್ಟಿ ಹಳ್ಳಿ ಗ್ರಾಮ ಬೆಂಗಳೂರು ನಾರ್ತ್ ತಾಲ್ಲೂಕ್‌ಗೆ ಸೇರಿದೆ. ಇದರ ಸರ್ವೆ ನಂ. ೫೭–೫೮–೫೯–೬೦ ಮತ್ತು ೭೧ (೩) ಇಲ್ಲಿ ೩೦ ಎಕರೆ ಜಮೀನನ್ನು ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ವಶಪಡಿಸಿಕೊಳ್ಳುವುದಕ್ಕೆ ೧೯೭೮ರಲ್ಲಿ ತೀರ್ಮಾನವಾಗಿದೆ. ೧೫–೧–೭೮ರಲ್ಲಿ ಪೂರ್ವಭಾವಿ ೪ (೧) ನೋಟಿಫಿಕೇಷನ್ ಬಂತು, ೮–೩–೭೮ರಲ್ಲಿ ೬ (೧) ನೋಟಿಫಿಕೇಷನ್ ಬಂತು. ಸಂಬಂಧಪಟ್ಟ ಭೂ ಮಾಲೀಕರಿಂದ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಸಬ್ ಡಿವಿಜನ್‌ನಿಂದ ಭೂ ಸ್ವಾಧೀನಾಧಿಕಾರಿಗಳು ಪರಿಹಾರ ಧನ ನಿಗದಿ ಮಾಡಿದರು. ನಂತರ ಅವರು ಕೋರ್ಟಿಗೆ ಹೋದರು. ಕೋರ್ಟಿನಲ್ಲಿ ಕೂಡ ನಿಗದಿಯಾದ ಪರಿಹಾರ ಧನವನ್ನು ಭೂ ಮಾಲೀಕರಿಗೆ ಪಾವತಿ ಮಾಡಿ. ಸಂಬಂಧಪಟ್ಟ ಜಮೀನನ್ನು ಸ್ವಾಧೀನಪಡಿಸಿಕೊಂಡು ಬೆಂಗಳೂರು ಸಬ್ ಡಿವಿಜನಲ್ ಆಫಿಸ್ಸೆಂಟ್ ಕಮೀಷನರ್ ರವರು ಕೆ.ಡಿ.ಡಿ.ಪಿ.ಗೆ ೧೦ ವರ್ಷಗಳ ಹಿಂದೆ ವಹಿಸಿಕೊಟ್ಟರು. ೧೯೭೯ರಲ್ಲಿ ಪರಿಹಾರಧನವನ್ನು ಪಡೆದ ಭೂಮಾಲೀಕರು ೧೦ ವರ್ಷಗಳ ಕಾಲ ಜಮೀನಿನ ತಂಟೆಗೆ ಹೋಗಲಿಲ್ಲ, ನಿಮ್ಮ ಸರ್ಕಾರ ಬಂದ ೬ ತಿಂಗಳಲ್ಲಿ ಮೋಹನರಾಜ್ ಎನ್ನುವವನು ಸೇರಿಕೊಂಡು, ಒಂದು ಇಂಚು ಇಲ್ಲದ ಹಾಗೆ ಮನೆ ಕಟ್ಟಿಸಿದ್ದಾರೆ, ಈ ಮೋಹನ್ ರಾಜ್ ಯಾರು ? ಉಳಿದ ಸೊಸೈಟಿಗಳ ಬಗ್ಗೆ ತಾವು ಇಲ್ಲಿ ಮಾತನಾಡುತ್ತೀರಿ. ಆದರೆ ಇದು ಸರ್ಕಾರದ ಆಸ್ತಿ. ಬೆಂಗಳೂರು ಡೈರಿ ಡವಲಪ್‌ಮೆಂಟ್‌ನ ಆಸ್ತಿ. ಕಳೆದ

ತಿಂಗಳಲ್ಲಿ ಅಲ್ಲಿ ಮನೆಗಳನ್ನು ಕಟ್ಟಬೇಕಾದರೆ, ನಿಮ್ಮ ಮ್ಯಾನೇಜಿಂಗ್ ಡೈರೆಕ್ಟರ್ ಏನು ಮಾಡ್ತಿದ್ದರು. ಇದು ಸುಮಾರು ೧೦-೧೫ ಕೋಟಿ ರೂಪಾಯಿ ಆಸ್ತಿ. ನಿಮಗೆ ಇದ್ದಂಥ ಆಸ್ತಿಯನ್ನು ಪರಭಾರೆಮಾಡಲು ಬಿಟ್ಟಂತಹ ಜವಾಬ್ದಾರಿ ಯಾರದ್ದು ? ಇದು ಇಲಾಖೆಗೆ ಸೇರಿದ್ದು ಮಾತ್ರವಲ್ಲ. ನಿಮ್ಮ ಕ್ಷೇತ್ರಕ್ಕೆ ಸೇರಿದ ಜಾಗ. ಹತ್ತು ವರ್ಷಗಳ ಹಿಂದೆ ಈ ಜಾಗವನ್ನು ಸರ್ಕಾರ ಕರ್ನಾಟಕ ಮಿಲ್ಕ್ ಫೆಡರೇಷನ್‌ಗೆ ಕೊಟ್ಟರು, ಏತಕ್ಕೆ ಕೊಟ್ಟರು, ರೈತರ ಸಲುವಾಗಿ, ಯೂನಿಯನ್ ಸಲುವಾಗಿ ಡವಲಪ್‌ಮಾಡಿ ಎಂದು ಕೊಟ್ಟರು. ಕಳೆದ ೫-೬ ತಿಂಗಳಲ್ಲಿ ಅಲ್ಲಿ ಮನೆ ಕಟ್ಟಿಸಲಾಗಿದೆ. ಈ ಮೋಹನರಾಜ್ ಎಂಬುವನು ತಮಿಳುನಾಡಿನಿಂದ ಬಂದವನು. ಅವನು ಅಲ್ಲಿನ ಆಸ್ತಿಯನ್ನೆಲ್ಲಾ ಹೊಡೆದುಬಿಟ್ಟಿದ್ದಾನೆ. ಯಾರನ್ನಾದರೂ ಇನ್ಸ್‌ಪೆಕ್ಷನ್‌ಗೆ ಕಳುಹಿಸಿ, ಇಲ್ಲವೇ ನಾವು ನೀವು ಕೋಗೋಣ ನಡೆಯಿರಿ. ಹೀಗೆ ಆಸ್ತಿಯಲ್ಲಾ ಪರಭಾರೆ ಆಗಿದೆ. ಈ ಬಗ್ಗೆ ಗೆಜೆಟ್ ನೋಟಿಫಿಕೇಷನ್ ಇದೆ, ಅದನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅದು ನನಗೆ ಗೊತ್ತಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಆಸ್ತಿ ಪರಭಾರೆ ಮಾಡಿದ ಹೊಣೆಗಾರಿಕೆಯನ್ನು ಯಾರ ಮೇಲೆ ನಿಗದಿ ಮಾಡಬೇಕು. ಅವ್ಯವಹಾರ ಅಂತ ಕರೆದರಲ್ಲ, ಅದು ಇಲ್ಲಿ ನಡೆದಿದೆ. ಅವ್ಯವಹಾರ ಬ್ಯಾಂಕ್ ಡಿಪಾಸಿಟ್ ಇಡುವುದರಲ್ಲಿ ನಡೆದಿದೆ. ಅವ್ಯವಹಾರ ಮೂರು ಲಕ್ಷ ಲೀಟರ್ ಹಾಲನ್ನು ಬೆಂಗಳೂರು ಮಿಲ್ಕ್ ಯೂನಿಯನ್‌ನವರು ತಂದು ಮಾಡುತ್ತಿದ್ದರು. ಅವರ ಕೆಪಾಸಿಟಿ ೧½ಲಕ್ಷ ಲೀಟರ್ ಇದ್ದರೂ ೩ ಲಕ್ಷ ಲೀಟರ್ ತಂದು ಏನು ಮಾರಾಟ ಮಾಡುತ್ತಿದ್ದರು, ಅದರ ಕ್ಯಾಪಾಸಿಟಿಯನ್ನು ಎರಡೂವರೆ ಲಕ್ಷಕ್ಕೆ ಇಳಿಸಿದ್ದಿರಲ್ಲ, ಅಲ್ಲಿ ಅವ್ಯವಹಾರ ನಡೆದಿದೆ. ಈಗ ಕರೆದ ಹಾಲು ಬೆಳಕು ಹರಿಯುವಷ್ಟು ಹೊತ್ತಿಗೆ ಒಡೆದು ಹೋಗುತ್ತದೆ ಬೆಳಿಗೆ ಕರೆದ ಹಾಲು ಸಾಯಂಕಾಲದ ಹೊತ್ತಿಗೆ ಒಡೆದು ಹೋಗುತ್ತದೆ. ಇಡೀ ರೈತ ಸಮುದಾಯ ಬೆಂಗಳೂರಿನ ಎರಡು ಜಿಲ್ಲೆಗಳಿಂದ ಮತ್ತು ಕೋಲಾರದಿಂದ ಹಾಲು ಕರೆದು ಬೆಂಗಳೂರಿಗೆ ತಂದರೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರೆ ಅವರು ಎಲ್ಲಿಗೆ ಹೋಗಬೇಕು. ಇದನ್ನು ನನಗೆ ತಾವು ಹೇಳಬೇಕು. ೫೦ ಲಕ್ಷ ಲೀಟರ್ ಹಾಲು ವಾಪಸ್ ಹೋದರೆ ಹೇಗೆ ? ಆದ್ದರಿಂದ ದಯಮಾಡಿ ಇದನ್ನು ತಾವು ಲಘುವಾಗಿ ಕಾಣತಕ್ಕದ್ದಲ್ಲ. ಇದರ ಹಿನ್ನೆಲೆ ಬಗ್ಗೆ ಹೇಳುವುದಾದರೆ ನೂರಾರು ಜನ ಡೈರಿಯನ್ನು ಕಟ್ಟುವುದಕ್ಕೆ ಶ್ರಮಿಸಿದ್ದಾರೆ. ಬೆಂಗಳೂರಿನ ಕನ್‌ಸ್ಯೂಮರ್ಸ್‌ಗೆ ಒಳ್ಳೆಯ ಹಾಲನ್ನು ಕೊಡಬೇಕು ಎಂದು ಕೇಂದ್ರ ಸರ್ಕಾರದ ಆಪರೇಷನ್ ಫ್ಲಡ್-೧, ಆಪರೇಷನ್ ಫ್ಲಡ್-೨ ಈಗ ಆಪರೇಷನ್ ಫ್ಲಡ್-೩ಯಲ್ಲಿ ಸಹಸ್ರಾರು ಕೋಟಿ ರೂಪಾಯಿಗಳನ್ನು ಕೇಂದ್ರಸರ್ಕಾರದಿಂದ ಮತ್ತು ಹೊರಗಡೆಯ ಹಣಕಾಸಿನ ಸಂಸ್ಥೆಗಳಿಂದ ಪಡೆದು ಇಲ್ಲಿ ಅಳವಡಿಸಿದ್ದೇವೆ . ಇದನ್ನು ನಡೆಸಿಕೊಂಡು ಹೋಗುವುದಕ್ಕೆ ಒಂದು ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅವರು ಸಹಕಾರ ಸಂಘ ಮಾಡಿಕೊಂಡಿದ್ದಾರೆ, ಆ ಸಂಘದ ಮೂಲಕ ತಮಗೆ ಬೇಕಾದವರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ, ಆಯ್ಕೆಯಾದಂಥ ಜನ ಡಿಸ್ಟ್ರಿಕ್ಟ್ ಫೆಡರೇಷನ್ ಯೂನಿಯನ್‌ಗಳನ್ನು ಮಾಡಿಕೊಂಡು ರಾಜ್ಯಮಟ್ಟದಲ್ಲಿ ಒಂದು ಫೆಡರೇಷನ್ ಮಾಡಿಕೊಂಡಿದ್ದಾರೆ. ಆ ಫೆಡರೇಷನ್‌ನವರು ಹೇಗೆಹೇಗೆ ನಡೆದುಕೊಳ್ಳಬೇಕು ಎಂದು ಶಿಸ್ತಾರ್ಮಾನ ಮಾಡುತ್ತಾರೆ. ತಾವು ಏಕೆ ಅಲ್ಲಿಗೆ ಹೋಗಿ ಕೈ ಹಾಕುತ್ತೀರಿ ? ತಮಗೆ ಅಧಿಕಾರ ಏನಿದೆ ? ಈ ಕಾರಣ ನೌಕರರು ಸಿಡಿದೆದ್ದಿದ್ದಾರೆ. ಈ ಮ್ಯಾನೇಜಿಂಗ್ ಡೈರಕ್ಟರ್‌ರ ಹಿಂದಿನ ಕತೆ ಬಹಳ ಇದೆ. ಆ ಕತೆಗಳೆಲ್ಲ ಗೊತ್ತಿದ್ದರಿಂದ ಇವರನ್ನು ಹಾಕಬೇಡಿ ಎಂದು ಹೇಳಿದ್ದು ಇದರಲ್ಲಿ ವೈಯುಕ್ತಿಕ ದ್ವೇಷ ಏನಿದೆ ? ಯಾರು ನಡೆಸುತ್ತಾರೊ ಅವರು ಚೆನ್ನಾಗಿ ನಡೆಸಲಿ. ಏಕೆಂದರೆ, ಇಲ್ಲಿ ಕನ್‌ಸ್ಯೂಮರ್ಸ್ ಇದ್ದಾರೆ. ಪ್ರೊಡ್ಯೂಸರ್ ಇದ್ದಾರೆ. ಇದು ಬರೀ ಒಂದು ಭಾಗದ ಜನರಿಗೆ ಸೇರಿದ್ದಲ್ಲ. ನಿಮಗೆ ಅದೂ ಬೇಕು ಅಂದರೆ ನನ್ನ ಹತ್ತಿರ ಇದೆ, ಅದನ್ನು ಕೊಡುತ್ತೇನೆ. ಹಿಂದೆ ಇದೇ ಮ್ಯಾನೇಜಿಂಗ್ ಡೈರಕ್ಟರ್ ಮೇಲೆ ಆಂದರೆ ಶ್ರೀಮಾನ್ ಎಸ್. ಎಸ್. ವಿಮಾನಾಕ್ಷಿ ಸುಂದರಂ, ಮ್ಯಾನೇಜಿಂಗ್ ಡೈರಕ್ಟರ್, ಕೆ.ಎಂ.ಎಫ್ ಆಗಿದ್ದಾಗ, ಯಾವ ರೀತಿ ಆಪಾದನೆಗಳನ್ನು ಮಾಡಿದ್ದರು, In contravention of Section 68 of the Karnataka Cooperative Societies Act, Bank tranctions with UCO Bank and Canara Bank. ಆಗ ಆಪರೇಷನ್ಸ್ ಏನು ಮಾಡಿದ್ದರು ಅದನ್ನು ತರಿಸಿ ನೋಡಿ. ಇದೇ ತಪ್ಪನ್ನು ಪುನಃ ಅಂದರೆ ಇದೇ ಯೂನಿಯನ್‌ನಲ್ಲಿ ಹಿಂದೆ ಮಾಡಿದ ಅಪರಾಧವನ್ನೆ ಇಲ್ಲಿ ಪುನಃ ಮಾಡಿದ್ದಾರೆ. ಆ ಕಾರಣ ನಾನು ತಮ್ಮ ಮೂಲಕ ಅವರಲ್ಲಿ ಏನು ಪ್ರಾರ್ಥನೆ ಮಾಡು

ತ್ತೇನೆಂದರೆ, ನಾನು ಹೇಳಿರತಕ್ಕಂಥ ಈ ಅಂಶಗಳೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, ಇವತ್ತು ತಾವು ಪರೀಕ್ಷೆ ಮಾಡಿಸಬೇಕು. ೧ ಕೋಟಿ ೨೯ ಲಕ್ಷ ರೂಪಾಯಿ ಲಾಭ ಬಂದಿರತಕ್ಕಂಥ ಬೆಂಗಳೂರು ಅರ್ಬನ್ ಮತ್ತು ರೂರಲ್ ಡಿಸ್ಟ್ರಿಕ್ಟ್ ಕೋ ಆಪರೇಟೀವ್ ಮಿಲ್ಕ್ ಪ್ರೊಡ್ಯೂಸರ್ಸ್ ಸೊಸೈಟಿ ಯೂನಿಯನ್ ಈಗಾಗಲೆ ಸುಮಾರು ೩೦ ಲಕ್ಷ ರೂಪಾಯಿ ಲುಕ್ಸಾನಿಗೆ ಬಂದಿದೆ. ಆದುದರಿಂದ ದಯವಿಟ್ಟು ಒಬ್ಬ ವ್ಯಕ್ತಿ ಮೇಲೆ ಇಡೀ ಸಮುದಾಯ ವ್ಯವಹಾರವನ್ನು ಹೇರತಕ್ಕಂಥ ಪ್ರಯತ್ನ ಮಾಡಬೇಡಿ. ಅದಕ್ಕೆ ಅವರು ಯಾರನ್ನು ಕೇಳುತ್ತಾರೋ ಅವರನ್ನು ಹಾಕಿ. ಹಾಗೆ ಹಾಕದೆ ಇದ್ದರೆ ಹೈಕೋರ್ಟ್ ಆಜ್ಞೆಯನ್ನು ಮೀರಿ, ಸಹಕಾರ ಸಂಸ್ಥೆಗಳ ಶಾಸನವನ್ನು ಮೀರಿ, ಚುನಾಯಿತ ಪ್ರತಿನಿಧಿಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ಒಬ್ಬ ವ್ಯಕ್ತಿಯನ್ನು ಹೇರತಕ್ಕಂಥ ಪ್ರಯತ್ನ ಏಕೆ ನಡೆಯುತ್ತದೆ ? ಅಂತಹ ಅಗತ್ಯ ಏನಿದೆ. ನಿಮ್ಮ ಮೇಲೆ ಅತ್ಯಂತ ದೊಡ್ಡ ಜವಾಬ್ದಾರಿ, ನಂಬಿಕೆ ವಿಶ್ವಾಸವನ್ನು ಇಟ್ಟಿದ್ದಾಗ್ಗೆ, ಆ ವಿಶ್ವಾಸಕ್ಕೆ ಧಕ್ಕೆ ಬಾರದಹಾಗೆ, ವ್ಯಕ್ತಿಯ ಪ್ರತಿಷ್ಠೆಗೆ ಹೊರಗಡೆ ಸಾಮ್ಯೆಯ ಮತ್ತು ಜನರ ಹಿತವನ್ನು ಕಾಯ್ದುಕೊಂಡು ಬರಬೇಕು ಎಂದು ತಮ್ಮ ಮೂಲಕ ಮಾನ್ಯಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ).—ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ವಿರೋಧಪಕ್ಷದ ನಾಯಕರು ಈ ವಿಷಯಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ವಿವರವಾದಂಥ ವಿಷಯಗಳನ್ನು ಹೇಳಿದ್ದಾರೆ. ಅವರು ಹೇಳುವಂಥ ಉದ್ದೇಶವಿಷ್ಟೆ. ಮಾನ್ಯ ಬಸವಲಿಂಗಪ್ಪನವರು ಮಂತ್ರಿಗಳಾದ ಮೇಲೆ ನಿರ್ದೇಶಕರನ್ನು ಬದಲಾವಣೆ ಮಾಡಿ ಬೇರೆ ನಿರ್ದೇಶಕರನ್ನು ನೇಮಕಾತಿ ಮಾಡಿದ್ದಾರೆ. ಇದರಲ್ಲಿ ಸರ್ಕಾರದವರು ಶಾಮಿಲಾಗಿದ್ದಾರೆ ಎನ್ನತಕ್ಕಂಥ ಮಾತನ್ನು ಇಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಇಷ್ಟೇ ಹೇಳಲಿಕ್ಕೆ ಬಯಸುತ್ತೇನೆ. ಹಿಂದೆ ಇದ್ದಂಥ ನಿರ್ದೇಶಕರು ಬಹಳ ಚೆನ್ನಾಗಿ ಕೆಲಸ ಮಾಡಿ ಈ ಒಂದು ಹಾಲು ಉತ್ಪಾದಕರ ಮಹಾ ಮಂಡಲಿಗೆ ಹೆಚ್ಚಿಗೆ ಆದಾಯ ಬರುವಂತೆ ಶ್ರಮಿಸಿದ ಒಬ್ಬ ಪ್ರಾಮಾಣಿಕ ವ್ಯಕ್ತಿಯನ್ನು ತೆಗೆದುಹಾಕಿ ಬೇರೆ ಯಾರೋ ಒಬ್ಬ ಸರಿಯಾದ ರೀತಿ ಕೆಲಸ ಮಾಡಲಾರದಂಥ ವ್ಯಕ್ತಿಯನ್ನು ಸರ್ಕಾರದವರು ನೇಮಕಾತಿ ಮಾಡುವುದರಲ್ಲಿ ಆಸಕ್ತಿ ತೋರಿಸಿದ್ದಾರೆಂದು ನಾನು ಸ್ಪಷ್ಟವಾಗಿ ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಈ ವಿಷಯದ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಕೂಲಂಕಶವಾಗಿ ವಿಚಾರಗಳನ್ನು ಹೇಳಿದ್ದಾರೆ. ಮಾನ್ಯ ಬಸವಲಿಂಗಪ್ಪನವರು ಮಂತ್ರಿಗಳಾದ ಮೇಲೆ ಅಲ್ಲಿನ ನಿರ್ದೇಶಕರನ್ನು ಬದಲಾಣೆ ಮಾಡಿ, ಬೇರೆ ನಿರ್ದೇಶಕರನ್ನು ನೆಮಕ ಮಾಡಿದ್ದಾರೆ. ಈ ವಿಚಾರದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಸವಲಿಂಗಪ್ಪನವರು ಕರ್ನಾಟಕ ರಾಜ್ಯದ ಹಿರಿಯ ಮಂತ್ರಿಗಳು ಹಾಲು ಉತ್ಪಾದಕರ ಮಹಾಮಂಡಲಿಯಲ್ಲಿ ಹಿಂದೆ ಇದ್ದಂಥ ನಿರ್ದೇಶಕರು ಚೆನ್ನಾಗಿ ಕೆಲಸ ಮಾಡಿ, ಹೆಚ್ಚಿನ ಆದಾಯ ಬರುವುದಕ್ಕೆ ಪ್ರಾಮಾಣಿಕವಾಗಿ ದುಡಿದಿದ್ದರು. ಅಂಥವರನ್ನು ತೆಗೆದುಹಾಕಿ. ಸರಿಯಾಗಿ ಕೆಲಸ ಮಾಡದೇ ಇರತಕ್ಕ ವ್ಯಕ್ತಿಯನ್ನು ನೇಮಕ ಮಾಡಲಾಗಿದೆಯೆಂದು ಸ್ಪಷ್ಟವಾಗಿ ಹೇಳುತ್ತೇನೆ. ಸರ್ಕಾರ ಎಲ್ಲಿ ತಪ್ಪು ಮಾಡಿದೆ ಅದನ್ನು ಹೇಳುವುದು ವಿರೋಧ ಪಕ್ಷದ ಕರ್ತವ್ಯ, ಇದರಲ್ಲಿ ನಮ್ಮ ಸ್ವಾರ್ಥ ಏನೂ ಇಲ್ಲ. ಈ ಒಂದು ಇಲಾಖೆಗೆ ಉತ್ತಮವಾದಂಥ ಅಧಿಕಾರಿಗಳು ಬರಬೇಕು. ಉತ್ತಮವಾದಂಥ ಅಧಿಕಾರಿಗಳಿಂದ, ಸಾರ್ವಜನಿಕರಿಗೆ ಒಳ್ಳೆಯ ಕೆಲಸಗಳಾಗಬೇಕು, ಹಾಲು ಉತ್ಪಾದಕರ ಮಹಾ ಮಂಡಲಿ ವ್ಯವಹಾರದ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು. ತಪ್ಪಿತಸ್ಥರ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರ ಮಾತುಗಳನ್ನು ಆಲಿಸಿದ್ದೇನೆ. ನಿಮಗೆ ಮೆಚ್ಚಿಗೆಯನ್ನು ಕೂಡ ವ್ಯಕ್ತಪಡಿಸುತ್ತೇನೆ. ಎಲ್ಲೆಲ್ಲಿ ಕೆಟ್ಟುಹೋಗಿವೆ, ಆಲ್ಲೆಲ್ಲಾ ಸರಿಪಡಿಸುವುದು ನಮ್ಮ ಕರ್ತವ್ಯ. ಅದನ್ನು ತಾವು ಒಪ್ಪುತ್ತೀರಿ ಎಂದು ಕಾಣುತ್ತದೆ,

ಶ್ರೀ ಡಿ.ಬಿ. ಚಂದ್ರೇಗೌಡ.—ಚೆನ್ನಾಗಿರುವ ಕಡೆ ಕೆಡಿಸುವುದಕ್ಕೆ ಹೋಗಬೇಡಿ.

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕೆ ನೀವು ನನಗೆ ಸಾಕಷ್ಟು ಸಮಯ ಕೊಡಬೇಕು. ಬೆಂಗಳೂರು ಮಿಲ್ಕ್ ಡೈರಿ ಬಗ್ಗೆ ಮಾತನಾಡಿದ್ದಾರೆ. ಬಹಳ ವಿಷಯಗಳನ್ನು ಸಭೆಯ ಮುಂದಿಟ್ಟಿದ್ದಾರೆ. ನಾನು

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತಯಾರಾಗಿ ಬಂದಿರತಕ್ಕದ್ದು ಸ್ಟೈಕ್ ಬಗ್ಗೆ, ವಿರೋಧಪಕ್ಷದ ನಾಯಕರು ಮಾತನಾಡಿರತಕ್ಕದ್ದು ಅಲ್ಲಿನ ವ್ಯವಹಾರಗಳ ಬಗ್ಗೆ. ನಾನು ಎಲ್ಲವನ್ನೂ ಈಗಲೇ ಹೇಳುತ್ತೇನೆ. ಮೊದಲು ಸ್ಟೈಕ್ ಬಗ್ಗೆ ಒಂದು ಮಾತು ಹೇಳಿ, ಮುಂದೆ ತಮಗೆ ಉತ್ತರ ಕೊಡುತ್ತೇನೆ. ಅವರು ಸ್ಟೈಕ್ ನೋಟೀಸ್ ಕೊಟ್ಟಿದ್ದು ನಿಜ. ಹೋದ ತಿಂಗಳು ೨೭ನೇ ತಾರೀಖು ಸ್ಟೈಕ್ ಆಗಬೇಕಾಗಿತ್ತು. ಸ್ಟೈಕ್ ನೋಟೀಸ್ ಕೊಟ್ಟವರೇ ಮುಂದಕ್ಕೆ ಹಾಕಬೇಕೆಂದು ಹೇಳಿ, ಮುಂದಕ್ಕೆ ಹಾಕಿಸಿಕೊಂಡಿದ್ದಾರೆ. ಏನೂ ಕ್ರಮ ತೆಗೆದುಕೊಳ್ಳಬೇಡಿ ಎಂದು ಹೇಳಿದ್ದಾರೆ. ಅದು ಅಲ್ಲಿಗೆ ಬಿಟ್ಟು ಹೋಯಿತು ಆದರಲ್ಲಿ ಮಾರ್ಕ್ಸಿಸ್ಟ್ ಪಕ್ಷದ ಯೂನಿಯನ್‌ನವರು ಇದ್ದರು. ಅವರು ತಮಕೂರು ಯೂನಿಯನ್‌ನಲ್ಲಿ ಸಹ ಪ್ರವೇಶ ಮಾಡಿದರು. ತುಮಕೂರು ಯೂನಿಯನ್‌ನಲ್ಲಿ ಯಾವ ರೈತರು ವ್ಯವಹಾರ ನಡೆಸುತ್ತಿದ್ದರು ಅಲ್ಲಿ ಇವರು ಬಹಳ ನಷ್ಟ ಮಾಡಿದರು. ನಂತರ ಬೆಂಗಳೂರು ಯೂನಿಯನ್‌ನಲ್ಲಿ ಕೈಹಾಕಿದರು. ಅವರು ಇಲ್ಲಿ ಕೈಹಾಕಿ ಮುತ್ತೆ ಇದನ್ನು ಸಹ ಕೆಡಿಸತಕ್ಕ ಪ್ರವೃತ್ತಿ ನಮಗೆ ಕಂಡು ಬಂದಿದ್ದರಿಂದ ಸ್ವಲ್ಪ ದಿಟ್ಟ ನಿಲುವು ತಳೆದಿದ್ದೇವೆ. ಈ ಕೆ.ಎಂ.ಎಫ್. ಆರ್ಗನೈಸೇಷನ್ ಇಡೀ ಇಂಡಿಯಾ ದೇಶದಲ್ಲಿಯೇ ಮೊಟ್ಟಮೊದಲನೇ ಸಂಸ್ಥೆ, ಸುಮಾರು ಇದರ ವ್ಯವಹಾರ ೨೫೫ ಕೋಟಿ ರೂಪಾಯಿಗಳು. ಇಷ್ಟು ಸರಿಯಾಗಿ ನಡೆಯತಕ್ಕ ಸಂಸ್ಥೆ ಇನ್ನೊಂದಿಲ್ಲ. ಈಗ ಇದರ ವ್ಯವಹಾರ ೯ ಜಿಲ್ಲೆಗಳಲ್ಲಿ ಮಾತ್ರ ನಡೆಯುತ್ತಿದೆ. ಹೆಚ್ಚಿನ ಹಣವನ್ನು ತಂದು ಎಲ್ಲಾ ಜಿಲ್ಲೆಗಳಲ್ಲಿಯೂ ಈ ಸಂಸ್ಥೆಯನ್ನು ಕಟ್ಟುವ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ. ಇದರಲ್ಲಿ ದುರುದ್ದೇಶ ಏನೂ ಇಲ್ಲ. ಅದಕ್ಕೋಸ್ಕರ ವಿಶೇಷ ಘಟಕ ಯೋಜನೆಯಲ್ಲಿ ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದನ್ನು ಯಾವ ರೀತಿ ವಿಸ್ತರಣೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಆದ್ದರಿಂದ ತಾವು ಸರ್ಕಾರದ ಉದ್ದೇಶದ ಬಗ್ಗೆ ಯಾವ ರೀತಿಯಲ್ಲಿಯೂ ಅನ್ಯಥಾ ಯೋಚನೆ ಮಾಡಬೇಡಿ. ಇದರಲ್ಲಿಯೂ ನನ್ನಲ್ಲಿ ನಿಮಗೆ ನಂಬಿಕೆ ಇದ್ದರೆ, ನನ್ನ ವ್ಯವಹಾರದಲ್ಲಿ ನಂಬಿಕೆ ಇದ್ದರೆ ದಯಮಾಡಿ ಅನ್ಯಥಾ ಯೋಚನೆ ಮಾಡಬೇಡಿ. ಈಗ ಸ್ಟೈಕ್ ಇಲ್ಲ. ತಾವು ಒಂದು ವಿಚಾರ ಹೇಳಿದ್ದೀರಿ. ನಾಳೆ ಹೇಳಿದ್ದರೆ ಚೆನ್ನಾಗಿತ್ತು. ನಾನು ಮಂತ್ರಿಯಾದ ಮೇಲೆ ಬೆಂಗಳೂರು ಮಿಲ್ಕ್ ಯೂನಿಯನ್‌ಗೆ ಭೇಟಿ ಕೊಟ್ಟಿದ್ದೇನೆ. ಅಲ್ಲಿನ ನಡವಳಿಕೆಗಳ ಬಗ್ಗೆ ನಾನು ತನಿಖೆ ಮಾಡಿದ್ದೇನೆ. ಈ ಬಗ್ಗೆ ನನ್ನ ಹತ್ತಿರ ಒಂದು ನೋಟ್ ಇದೆ. ತಮಗೂ ಅದನ್ನು ಕಳುಹಿಸುತ್ತೇನೆ. ತಾವು ಹೇಳಿದ ಹಾಗೆ ಒಂದು ವರ್ಷಕ್ಕೆ ಸುಮಾರು ೯೦ ಕೋಟಿ ರೂಪಾಯಿಗಳ ವ್ಯವಹಾರ ಇದೆ ಈ ವ್ಯವಹಾರದ ಬಗ್ಗೆ ಏನು ಲೆಕ್ಕಗಳು ಇವೆ. ಅವುಗಳನ್ನು ಪರಿಶೀಲನೆ ಮಾಡಿದಾಗ ಕಳೆದ ಮೂರು ವರ್ಷಗಳ ಆಡಿಟ್ ರಿಪೋರ್ಟ್ ಇಲ್ಲ. ಜೊತೆಗೆ ಅಲ್ಲಿರತಕ್ಕ ನೌಕರರು ಲೆಕ್ಕಪತ್ರಗಳನ್ನು ಸರಿಯಾಗಿ ಇಟ್ಟಿರಲಿಲ್ಲ, ಇದೊಂದೇ ಅಲ್ಲ. ಅಲ್ಲಿ ಕೆಲಸ ಮಾಡಲು ಸುಮಾರು ೫೦೦ ಜನ ನೌಕರರು ಬೇಕು. ಈಗ ಎಷ್ಟು ಜನರು ಇದ್ದಾರೆ ೧೧೦೦ ಜನ ಇದ್ದಾರೆ. ಲಾಭ ಹೇಗೆ ಆಗುತ್ತದೆ ಹೇಳಿ ಇದರಲ್ಲಿ. ಈಗ ನಾವು ಅಲ್ಲಿಂದ ಸುಮಾರು ೬೦೦–೭೦೦ ಜನ ತೆಗೆದರೆ, ಹೆಚ್ಚಿನ ಲಾಭ ಸಂದಾಯವಾಗುತ್ತದೆ. ಈಗ ತೆಗೆಯುವುದು ಬಿಡುವುದು ಏನು ವಿಚಾರ ಅಂತ ಯೋಚನೆ ಮಾಡಿದ್ದೇನೆ. ಇವರನ್ನು ಇಲ್ಲಿ ಇಟ್ಟುಕೊಂಡು, ಇಷ್ಟು ಆನಾವಶ್ಯಕವಾದ ಸಿಬ್ಬಂದಿ ಇಟ್ಟುಕೊಂಡು ಹೆಚ್ಚು ಲುಕ್ಸಾನನ್ನು ನಾವು ಈ ಕೆ.ಎಂ.ಎಫ್.ಗೆ ಈ ಸಂಸ್ಥೆಗೆ ಆಗುವುದನ್ನು ತಡೆಯಬೇಕಾದರೆ, ಈ ನೌಕರರು ಬೇರೆ ಯೂನಿಯನ್‌ಗೆ ವರ್ಗಾವಣೆ ಮಾಡಲೇಬೇಕು. ವರ್ಗಾವಣೆ ಯಾರು ಮಾಡುತ್ತಾರೆ? ಈಗ ಡಿಸ್ಟ್ರಿಕ್ಟ್ ಯೂನಿಯನ್ಸ್‌ನಲ್ಲಿ ಎಲ್ಲಾ ಅವರೇ ಸ್ವತಂತ್ರರು ಎಂದು ಇಟ್ಟು ಕೊಳ್ಳೋಣ. ಅವರೇ ಈ ಸಹಕಾರ ಸಂಸ್ಥೆ ಪ್ರಕಾರ ಆಡಳಿತ ನಡೆಸುತ್ತಾರೆ ಎಂದು ಇಟ್ಟುಕೊಳ್ಳೋಣ, ಇದು ಒಂದು ವ್ಯವಸ್ಥೆ. ಕೆ.ಎಂ.ಎಫ್. ಅಂದರೆ ಇದು ಒಂದು ಫೆಡರೇಷನ್ ವ್ಯವಸ್ಥೆ, ಈ ವ್ಯವಸ್ಥೆಯಲ್ಲಿ ಎಲ್ಲಾ ಯೂನಿಯನ್‌ಗಳು ಕೆಲಸ ಮಾಡಬೇಕು, ಒಂದು ವ್ಯವಸ್ಥೆ ಆದಮೇಲೆ ಇಲ್ಲಿರತಕ್ಕಂಥ ನೌಕರರನ್ನು ನಾವು ಬೇರೆ ಕಡೆಗೆ ವರ್ಗಾವಣೆ ಮಾಡಬಹುದಲ್ಲ, ವರ್ಗಾವಣೆ ಮಾಡಲಿಕ್ಕೆ ಯೂನಿಯನ್‌ನವರು ಒಂದು ನಿರ್ಣಯ ಮಾಡಬೇಕು. ಅವರು ಇಲ್ಲ ಅಂದರೆ ನಾವು ಸುಮ್ಮನೆ ಇರಬೇಕು. ಕೈಕಟ್ಟಿ ಕೂಂಡು ಕುಳಿತಿರಬೇಕು. ಈಗ ಅಲ್ಲಿನ ಮ್ಯಾನೇಜಿಂಗ್ ಡೈರೆಕ್ಟರ್ ಬಗ್ಗೆ ಬಹಳ ಪ್ರಸ್ತಾಪ ಮಾಡಿದ್ದೀರಿ. ಹೋದ ಮ್ಯಾನೇಜಿಂಗ್ ಡೈರೆಕ್ಟರ್ ಬಗ್ಗೆ ನಾನು ಹೇಳಿದ್ದೇನೆ. ನಾನು ತಮಗೆ ಕಳುಹಿಸಿ ಕೊಡುತ್ತೇನೆ. ನಾನು ಏನು ಇನ್ಸ್‌ಪೆಕ್ಷನ್ ರಿಪೋರ್ಟ್ ಕೊಟ್ಟಿದ್ದೇನೆ, ಆದರ ನಂತರ ನಾನು ಮಾಡಿದ್ದೇನೆ. ನಾನು ಸುಮ್ಮನೆ ಬೇಕಾಬಿಟ್ಟಿ ಅವರನ್ನು ತರಬೇಕು, ಇವರನ್ನು ಕಳುಹಿಸಬೇಕು ಎಂದು ನಾನು ಏನೂ ಮಾಡಿಲ್ಲ. ಆ ರಿಪೋರ್ಟ್ ಬಂದಮೇಲೆ ಅವರಿಗೆ ನಾನು ಕಳುಹಿಸಿದ್ದೇನೆ. ನಾನು ಸ್ಟೋರ್‌ಗೆ ಹೋಗಿದ್ದೆ ಸ್ಟೋರ್‌ನಲ್ಲಿ ಸರಿಯಾಗಿರತಕ್ಕಂಥ ವ್ಯವಸ್ಥೆ ಇರಲಿಲ್ಲ. ಆಗಿಂದಾಗ್ಗೆ ಸ್ಟೈಕ್ ಮಾಡುವುದು ನಡೆಯುತಿತ್ತು. ಹೀಗಾಗಿ ನಾವು ಮಾಡಿದ್ದೇವೆ. ಈಗ ಬಂದಿರತಕ್ಕ ಮ್ಯಾನೇಜಿಂಗ್ ಡೈರೆಕ್ಟರ್ ಎನಿದ್ದಾರೆ ತಾವು ಅವರ ಬಗ್ಗೆ ಬಹಳ ದೂರುಗಳನ್ನು ಹೇಳಿದ್ದೀರಿ. ಡಿಪಾಸಿಟ್ಸ್ ಬಗ್ಗೆ ಹೇಳಿದ್ದೀರಿ. ಲುಕಾ ನು ಬಗ್ಗೆ ಹೇಳಿದ್ದೀರಿ. ಎಲ್ಲಾ ಹೇಳಿದ್ದೀರಿ, ನಾನು ತಮಗೆ

ಸದನದಲ್ಲಿ ಹೇಳಬೇಕು, ನಾನು ಒಂದು ಗರ್ವದಿಂದ ಹೇಳುತ್ತಿದ್ದೇನೆ. ಇವರಷ್ಟು ದಕ್ಷ ಮ್ಯಾನೇಜಿಂಗ್ ಡೈರೆಕ್ಟರ್ ಇನ್ನೊಬ್ಬರು ಇಲ್ಲ ಅವರಿಗೆ ಆಷ್ಟೇ ಕ್ವಾಲಿಫಿಕೇಷನ್ ಇದ್ದಾವೆ. ಮತ್ತೆ ಅವರ ವ್ಯವಹಾರವು ಆಷ್ಟೇ ಚೆನ್ನಾಗಿದೆ, ಅವರು ಸತ್ಯಸಂಧತೆಯಿಂದ ಕೆಲಸ ಮಾಡುತ್ತಿದ್ದಾರೆ. ಬಹಳ ನುರಿತವರಿದ್ದಾರೆ. ಇಲ್ಲಿ ಏನಾಗಿದೆ, ಇಷ್ಟು ವ್ಯವಹಾರದಲ್ಲಿ ಕೆಲವರಿಗೆ ಹೊಟ್ಟೆಕಿಚ್ಚು ಬರುತ್ತದೆ. ಹೊಟ್ಟೆಯುರಿ ಬರುತ್ತದೆ ಯಾರೋ ಒಬ್ಬ ಅನಾಮಧೇಯ ತನ್ನ ದಕ್ಷತೆಯ ಆಧಾರದ ಮೇಲೆ ಏನೋ ಒಂದು ಅಧಿಕಾರಕ್ಕೆ ಬರುತ್ತಾನೆ. ಅವರ ಬಗ್ಗೆ ನೂರು ಹೇಳತಕ್ಕಂಥಾದ್ದು ಹೊಟ್ಟೆಕಿಚ್ಚು ಪಡತಕ್ಕಂಥಾದ್ದು ವಾಸ್ತವ ಇರುತ್ತದೆ. ಅವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ನಾನು ತಮಗೆ ಇಷ್ಟೇ ಹೇಳುತ್ತೇನೆ, ಈ ಅಧಿಕಾರಿ ದಕ್ಷರು ಎಂದು ನನಗೆ ಮನವರಿಕೆಯಾಗಿದೆ. ಸರಿಯಾಗಿ ಕೆಲಸಮಾಡುತ್ತಿದ್ದಾರೆ. ಅವರು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ನನಗೆ ಮನವರಿಕೆಯಾದರೆ ಅವರನ್ನು ನಾನು ಅಲ್ಲಿ ಇಟ್ಟುಕೊಳ್ಳುವುದಿಲ್ಲ. ದಕ್ಷರಲ್ಲದವರನ್ನು ತೆಗೆಯಲೇಬೇಕಾಗುತ್ತದೆ. ಈಗ ಹಾಸನದಲ್ಲಿ ಮಿಲ್ಕ್ ಯೂನಿಯನ್ ಇದೆ. ಅದರ ಬಗ್ಗೆ ನಾವು ವಿಚಾರ ಮಾಡುತ್ತೇವೆ. ಅದೆಷ್ಟು ದೂರುಗಳು, ಮಾನ್ಯ ಹನುಮೇಗೌಡರು ಇದ್ದಾರೋ ಇಲ್ಲವೋ ಗೊತ್ತಿಲ್ಲ. ಹನುಮೇಗೌಡರು ಇಷ್ಟು ಗಾತ್ರದ್ದು ಒಂದು ಕಟ್ಟು ತಯಾರು ಮಾಡಿದ್ದಾರೆ. ಅವರ ಬಗ್ಗೆ ವಿಚಾರ ಮಾಡಿಸಿದೆ, ಅದರ ಬಗ್ಗೆ ಒಂದು ರಿಪೋರ್ಟ್ ಬಂದಿದೆ ನಾವು ಅವರನ್ನು ಅಲ್ಲಿ ಇಡಬೇಕೋ, ಅಥವಾ ಬೇರೆ ಕಡೆಗೆ ವರ್ಗಾವಣೆ ಮಾಡಬೇಕೋ ಎನ್ನತಕ್ಕ ಪ್ರಶ್ನೆ ಇದೆ. ಹೀಗೆ ಸರ್ಕಾರಕ್ಕೆ ಏನೂ ಅಧಿಕಾರ ಇಲ್ಲ. ಮತ್ತೆ ಅವರು ಸ್ವತಂತ್ರರು ಎಂದು ಹೇಳುವುದಾದರೆ ನಾನು ಒಂದು ಮಾತು ಹೇಳುತ್ತೇನೆ. ಎಲ್ಲಾ ಯೂನಿಯನ್ ಕಾಂಟ್ರಿಬ್ಯೂಷನ್ ಕೆಎಂಎಫ್‌ಗೆ ಕೊಟ್ಟಿರತಕ್ಕಂತಾದ್ದು ೩೩ ಲಕ್ಷ ಮಾತ್ರ. ಬಂಡವಾಳ ಎಷ್ಟು ಇದೆ ಸರ್ಕಾರದ್ದು. ನಾವು ಗ್ಯಾರಂಟಿ ಕೊಟ್ಟಿರುವುದು. ಬೇರೆ ಒಂದು ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್‌ನಿಂದ ತಂದಿರತಕ್ಕದ್ದು ಸುಮಾರು ೧೫೦ ಕೋಟಿ ರೂಪಾಯಿ ಇದೆ. ಈ ೧೫೦ ಕೋಟಿ ರೂಪಾಯಿಗೆ ಸರ್ಕಾರ ಗ್ಯಾರಂಟಿ ಕೊಟ್ಟಿದೆ. ಆದರೂ ಸರ್ಕಾರಕ್ಕೆ ಏನೂ ಅಧಿಕಾರ ಇಲ್ಲ. ಯೂನಿಯನ್‌ಗೆ ಎಲ್ಲಾ ಸ್ವತಂತ್ರ ಕೊಡಬೇಕು, ಸಹಕಾರ ಸಂಸ್ಥೆ ಅಂದರೆ ಸರ್ವ ಸ್ವತಂತ್ರ್ಯ ಕೊಡಬೇಕು ಪ್ರಜಾಪ್ರಭುತ್ವ ಅಂದರೆ, ಎಲ್ಲರಿಗೂ ಏನು ಬೇಕಾದರೂ ಮಾಡಲಿಕ್ಕೆ ಸ್ವೇಚ್ಛಾವೃತ್ತಿ ಮಾಡಲಿಕ್ಕೆ ಅವರಿಗೆ ಅವಕಾಶ ಕೊಡಬೇಕು ಎಂದು ತಮ್ಮ ಅಭಿಪ್ರಾಯ ಏನಿದೆ, ಅದಕ್ಕೆ ನಾನು ಒಪ್ಪುವುದಿಲ್ಲ. ನಮ್ಮ ಸರ್ಕಾರದ ಹಣ, ಗ್ಯಾರಂಟಿ ಕೊಟ್ಟಿರತಕ್ಕ ಹಣ, ಅದನ್ನು ನಾವು ರಕ್ಷಣೆ ಮಾಡಲೇಬೇಕು. ಈಗ ನೀವು ೩೩ ಲಕ್ಷ ಮಾತ್ರ ಕಾಂಟ್ರಿಬ್ಯೂಷನ್ ಮಾಡಿರತಕ್ಕವರು ಆದ್ದರಿಂದ ನಿಮಗೆ ಎಷ್ಟು ಅಧಿಕಾರ ಇರಬೇಕು ಎನ್ನುವುದರ ಬಗ್ಗೆ ತಾವು ಸಹಕಾರ ಸಂಸ್ಥೆಯ ಆಕ್ಟ್‌ಗಳನ್ನು ತಾವು ಓದಿರಬೇಕು. ಇದರಲ್ಲಿ ನಮ್ಮ ಪಾತ್ರ ಏನಿರಬೇಕು ಸರ್ಕಾರದ ಪಾತ್ರ ಏನಿರಬೇಕು ಎಂಬುದೆಲ್ಲಾ ತಮಗೆ ಗೊತ್ತಿದೆ. ನಾನು ಅದನ್ನು ಹೇಳಲಿಕ್ಕೆ ಹೋಗುವುದಿಲ್ಲ. ನಾನು ಹೇಳುತ್ತಿದ್ದೇನೆ, ಈ ಕೆಎಂಎಫ್‌ಗೆ ಅಂತ ನಾವು ಏನು ಸಾಲ ತೆಗೆದುಕೊಂಡಿದ್ದೇವೆ ಹಾಗೂ ಗ್ಯಾರಂಟಿ ಕೊಟ್ಟುಬಿಟ್ಟು ನಾವು ಸಾಲವನ್ನು ಪಡೆದಿದ್ದೇವೆ. ಅದನ್ನು ನೀವು ಯೂನಿಯನ್‌ನವರು ಎಲ್ಲಾ ಕಷ್ಟಪಟ್ಟು ಸಂಪಾದನೆ ಮಾಡಿ ಸಾಲ ವಾಪಸ್ಸು ಕೊಟ್ಟರೆ ಈ ಕೆಎಂಎಫ್‌ನ ನಿಮಗೆ ವಾಪಸ್ಸು ಕೊಡುತ್ತೇನೆ. ಅದನ್ನು ನಿಮಗೇ ಪರಭಾರೆ ಮಾಡುತ್ತೇವೆ. ನೀವೇ ತೆಗೆದುಕೊಳ್ಳಿ. ಅಲ್ಲಿ ನಮಗೆ ಸ್ವಲ್ಪವೂ ಹಿಡಿತವಿಲ್ಲದಿದ್ದರೆ ಹೇಗೆ ಎಂಬುದನ್ನು ತಾವೇ ಹೇಳಬೇಕು. ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ. ಇಲ್ಲಿಯ ಯೂನಿಯನ್‌ಗಳಲ್ಲಿ ನೂರಾರು ಜನರನ್ನು ನೇಮಕಾತಿ ಮಾಡಿಕೊಳ್ಳುತ್ತಿದ್ದಾರೆ. ಆದರೆ ಒಬ್ಬರನ್ನು ನೇಮಕ ಮಾಡಬೇಕೆಂದು ಯಾರ ಮನಸ್ಸಿನಲ್ಲೂ ಇಲ್ಲ. ಯಾರು ಅಲ್ಲಿ ಅಧ್ಯಕ್ಷರಾಗಿರುತ್ತಾರೆ, ಅವರಿಗೆ ಬೇಕಾದವರನ್ನು ಅಲ್ಲಿ ನೇಮಕ ಮಾಡಿಕೊಳ್ಳುತ್ತಾರೆ. ಉದಾಹರಣೆ ಹೇಳುವುದಾದರೆ, ನಿಮ್ಮ ಕ್ಷೇತ್ರದಲ್ಲಿ ಯಾರಿದ್ದಾರೆ. ಅವರಿಗೆ ಕೇಳಿದ ೧೮ ರಷ್ಟು ಹುದ್ದೆಗಳನ್ನು ರೆಸ್ಪರ್ ಪಿಸ್ಪವ್ ಪ್ರಕಾರ ನೀಡಬೇಕಾಗುತ್ತದೆ. ಆದರೆ ಆ ರು ಬಿಜೆಪಿಯವರನ್ನೂ ನೇಮಕ ಮಾಡಿಕೊಳ್ಳದಿದ್ದರೆ ಏನು ಮಾಡಲೀಯ? ಆ ಥ ಜಾಗದಲ್ಲಿ ಕೋ ಆಪರೆ ಟಿವ್ ಸೊಸೈಟೀಸ್ ಆ್ಯಕ್ಟ್‌ನ ನಿಯಮ ೩೦(ಬಿ) ಪ್ರಕಾರ ನಾವು ನಿರ್ದೇಶನವನ್ನು ಕೊಡಲೇಬೇಕಾಗುತ್ತದೆ. ಆದರೆ ನೀವು ನಿರ್ದೇಶನ ಕೊಡಬಾರದೆಂದು ಹೇಳಿ, ಒಂದು ವೇಳೆ ಕೊಟ್ಟರೆ ನಾವು ಕೋರ್ಟ್‌ಗೆ ಹೋಗುತ್ತೇವೆಂದು ಹೇಳುವುದಾದರೆ ಹೋಗಿ. ಸಹಕಾರ ಸಂಘಗಳ ಆ್ಯಕ್ಟ್ ೫೪ರ ಪ್ರಕಾರ ನಾವು ಎಕ್ಸ್‌ಟ್ರಾರ್ಡಿನರಿ ಗೆಜೆಟ್ ನೋಟಿಫಿಕೇಷನ್‌ನ್ನು ಮಾಡಿ ಹೊರಡಿಸಿ ತೆಗೆದುಕೊಂಡಿದ್ದೇವೆ. ಮತ್ತೆ ಒಂದು ಯೂನಿಯನ್‌ನಲ್ಲಿ ಎಷ್ಟು ದಿನಗಳವರೆಗೆ ಒಬ್ಬ ಸಹಕಾರಿ ಜಿಂಗ್ ಡೈರೆಕ್ಟರ್ ಇರಬೇಕು. ಅವರನ್ನು ಟ್ರಾನ್ಸ್‌ಫರ್ ಮಾಡಬೇಕಾದರೆ ಕೆ.ಎಂ.ಎಫ್. ನವರೇ ಮಾಡುವುದು. ಅದನ್ನು ಯೂನಿಯನ್‌ನವರು ಮಾಡುವುದಿಲ್ಲ. ಮೊನ್ನೆ ಕೆ.ಎಂ.ಎಫ್. ನ ಎಲ್ಲ ಯೂನಿಯನ್ ಪ್ರಸಿಡೆಂಟ್‌ಗಳೂ ಬಂದು ನನ್ನನ್ನು ಕಂಡರು. ನಾನು ಅವರಿಗೆ ಒಂದು ಮಾತನ್ನು ಹೇಳಿದೆ. ಯಾವ ಆರ್ಡರ್ ಏನೇ ಇರಲಿ ಈಗ ನೀವು ಸೆಲೆಕ್ಟ್

ಮಾಡಿ. ನೀವು ಹೇಳಿದಂತೆ ನಾನು ಕೇಳುತ್ತೇನೆಂದು ಹೇಳಿದೆ. ಇನ್ನು ೨ ದಿನ ಅವಕಾಶ ಕೊಡಿ ಎಂದು ಕೇಳಿದರು. ಇವತ್ತು ೧೧ನೇ ತಾರೀಖು. ಇವತ್ತಿನವರೆಗೂ ಅವರು ಬರಲಿಲ್ಲ. ಅವರು ಸಲಹೆ ಕೊಡಲಿಕ್ಕೆ ತಯಾರಿಲ್ಲ. ಅವರಿಗೆ ನಾವು ಬುದ್ಧಿ ಹೇಳಲಿಕ್ಕೆ ಆಗುತ್ತಿಲ್ಲ. ಅವರು ಕೋರ್ಟಿಗೆ ಹೋಗಲಿಕ್ಕೆ ತಯಾರಿದ್ದಾರೆ. ಏನು ಹೇಳುತ್ತೇನೆ, ನೀವು ಹೇಳಿದ್ದಕ್ಕೆ ನಾನು ವಿರುದ್ಧವಾಗಿ ಹೋದರೆ ನೀವು ಎಲ್ಲಿಗೆ ಬೇಕಾದರೂ ಹೋಗಿ. ಎಲ್ಲ ೧೯ ಜಿಲ್ಲೆಗಳಿಗೂ ವ್ಯಾಪಕವಾಗಿ ಈ ಸಂಸ್ಥೆಯನ್ನು ಸ್ಥಾಪನೆ ಮಾಡಿ ಬಡವರಿಗೆ ನಾವೆಲ್ಲರೂ ಸಹಾಯ ಮಾಡೋಣ, ಅವರ ಸೇವೆ ಮಾಡೋಣವೆಂದು ನಾನು ಹೇಳಿ ಕಳುಹಿಸಿದ್ದೇನೆ. ಆದರೆ ಅವರು ಇದುವರೆಗೂ ಬರಲಿಲ್ಲ. ಹೀಗಾದರೆ ನಾವು ಯಾವತೀತಿ ಅವರನ್ನು ನಂಬಬೇಕು? ಏನು ಮಾಡಬೆಕು? ನೀವೇ ಹೇಳಿ. Do you admit that we have some responsibility? Do you admit that this Government has administrative capacity?

SRI D. B. CHANDRE GOWDA.—Yes. You have full responsibility but where the law permits.

SRI B. BASAVALINGAPPA.—I am going by the law. I am using the weapon of law. I will carry out the purpose of law to safeguard the interest of the K. M. F. and the property interests of the K. M. F. ಆದ್ದರಿಂದ ನಾನು ಹೇಳುತ್ತಿದ್ದೇನೆ. ನನ್ನಿಂದ ಏನಾದರೂ ಲೋಪವಾಗಬೇಕು, ಇಲ್ಲದಿದ್ದರೆ, ನಾನು ನಿಮ್ಮ ಮಾತನ್ನು ಕೇಳಲಿಲ್ಲ ಎಂದು ನಿದರ್ಶನವಾಗಬೇಕು ಅಲ್ಲವೆ? ನೀವು ಹೇಳಿದಂತೆ ನಾನು ಕೇಳುತ್ತೇನೆಂದರೂ ಕೂಡ. ನೀವು ಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತಂದರೆ ಏನು ಮಾಡಬೇಕು? ಸರ್ಕಾರಕ್ಕೆ ಪ್ರತಿಷ್ಠೆ ಇಲ್ಲವೆ? ನನಗೆ ಪ್ರತಿಷ್ಠೆ ಇಲ್ಲವೆ? ನನಗೆ ಉಂಟು. ನಾನು ಇದನ್ನೇ ಜಾರಿ ಮಾಡುತ್ತೇನೆ. ನಿವು ಹೇಳಿದಂತೆ ಕೇಳುತ್ತೇನೆಂದು ಹೇಳಿದ್ದೇನೆ. ನಾನು ಹೇಳಿದಂತೆ ನೀವು ಕೇಳುವುದೂ ಇಲ್ಲ ಮತ್ತು ನಿಮ್ಮ ಮಾತಿಗೆ ತಕ್ಕಂತೆ ನೀವು ನಡೆಯುವುದೂ ಇಲ್ಲ ಎಂದರೆ ಹೇಗೆ? ಇದರಲ್ಲಿ ಏನು ಲೋಪ ಇದೆ? ಈ ನೀವು ಏನು ವಿಚಾರಗಳನ್ನು ಹೇಳಿದ್ದೀರಿ. ಅವುಗಳ ಬಗ್ಗೆ ನಾಳೆ ನೀವು ಮಾತನಾಡಿ. ಈಗ ಇಷ್ಟು ಸಾಕು, ಈಗ ಸ್ಟೈಕ್ ಬಗ್ಗೆ ನೋಟೀಸ್ ಕೊಟ್ಟಿದ್ದಾರೆ, ಅದನ್ನು ವಿತ್‌ಡ್ರಾ ಮಾಡಿದ್ದಾರೆ, ಅದರ ಬಗ್ಗೆ ನಾನು ಹೇಳಿದ್ದೇನೆ. ಪರಿಸ್ಥಿತಿ ಹೀಗಿದೆ. ನನ್ನ ಜವಾಬ್ದಾರಿ ಹೀಗಿದೆ. ಪ್ರಜಾಪ್ರಭುತ್ವದಲ್ಲಿ ಏನು ಸ್ವಾತಂತ್ರ್ಯ ಇದೆ, ಯೂನಿಯನ್‌ಗೆ ಏನು ಸ್ವಾತಂತ್ರ್ಯ ಇದೆ, ಅದರ ಪ್ರಕಾರ ನೀವು ಬಂದು ಚರ್ಚೆ ಮಾಡಿ. ನಾನು ನಿಮಗೇನಾದರೂ ವಿರುದ್ಧವಾಗಿ ಹೋದರೆ ನೀವು ಕೇಳಿದ್ದನ್ನು ಕೊಡುತ್ತೇನೆ. ನೀವು ಹೇಳಿದಂತೆ ನಾನು ಕೇಳುತ್ತೇನೆಂದು ಹೇಳಿದರೂ ಕೂಡ ನೀವು ಕೋರ್ಟಿಗೆ ಹೋಗಿ ಸ್ಟೇ ತಂದು ಸರ್ಕಾರವನ್ನು ಇಕ್ಕಟ್ಟಿನ ಪರಿಸ್ಥಿತಿಗೆ ತಂದಾಗ, ನಾವು ನಿಲುವು ತೆಗೆದುಕೊಳ್ಳಬೇಕೆಂಬುದನ್ನು ತಾವೇ ಹೇಳಿ.

ಶ್ರೀ ಡಿ. ಬಿ. ಚಂದ್ರೇಗೌಡ.— ನೀವು ಪ್ರತಿಷ್ಠೆಯ ಬಗ್ಗೆ ಮಾತನಾಡಿದ್ದೀರಿ. ಆದರೆ ಇಲ್ಲಿ ಶಾಸನಬದ್ಧವಾಗಿ ಕೆಲಸಬೇಕಾಗಿದೆಯೇ ಹೊರತು ವ್ಯಕ್ತಿಯ ಪ್ರತಿಷ್ಠೆಯ ಮೇಲಲ್ಲ. ಇಂಥ ಪ್ರತಿಷ್ಠೆಗಳನ್ನೇ ಹಿಂದಿನ ಜಿಲ್ಲಾ ಪರಿಷತ್ತು ಮತ್ತು ಪಂಚಾಯತ್ ರಾಜ್ಯಗಳ ಬಗ್ಗೆ ಪ್ರದರ್ಶನ ಮಾಡಲಿಕ್ಕೆ ಪ್ರಯತ್ನವನ್ನು ಮಾಡಿದಿರಿ. ಇಲ್ಲಿ ಚುನಾಯಿತ ಪ್ರತಿನಿಧಿಗಳಿದ್ದಾರೆ. ಅವರಿಗೆ ಬೇಕಾಗಿರತಕ್ಕ ಶಾಸನ ಇದೆ. ಆ ಶಾಸನಕ್ಕೆ ವಿರುದ್ಧವಾಗಿ ನಿಮ್ಮ ಪ್ರತಿಷ್ಠೆಯ ಉತ್ತರವನ್ನು ಕೇಳಲಿಕ್ಕೆ ನಾವು ಇಲ್ಲಿಗೆ ಬಂದಿಲ್ಲ. ಶಾಸನ ಸಭೆಯಲ್ಲಿ ನಾವು ಇರತಕ್ಕದ್ದು ಏತಕ್ಕೆ ಗೊತ್ತೇ? ಶಾಸನ ಬದ್ಧವಾದ ಅಧಿಕಾರವನ್ನು ಮಾತ್ರ ಮಾನ್ಯ ಮಂತ್ರಿಗಳು ನಡೆಸಬೇಕೆ ಹೊರತು ಶಾಸನಕ್ಕೆ ವಿರೋಧವಾಗಿ ಮಾಡತಕ್ಕ ನಿಮ್ಮ ಪ್ರಯತ್ನ ಏನಿದೆ, ಅದನ್ನು ನಾವು ಖಂಡಿಸಲೇಬೇಕಾಗುತ್ತದೆ. ತಾವು ಕೆಲವು ವಿಚಾರಗಳನ್ನು ಹೇಳಿದ್ದೀರಿ. ನಮಗೆ ಇದರ ವಿಚಾರ ಗೊತ್ತಿಲ್ಲ. ಆಡಿಟ್ ಆಗಿಲ್ಲವೆಂದು

ಕೆ–೧೦ ಪಿ. ಎಂ.

ಹೇಳಿದಿರಿ, ನಾನು ಇದರಲ್ಲಿ ಇಂಟರ್‌ಪ್ರಿಯರ್ ಆಗುವುದಿಲ್ಲ ಆದರೆ ಸರ್ಕಾರಕ್ಕೆ ಯಾವ ಪ್ರತಿಷ್ಠೆಯೂ ಇರಬೇಕಾಗಿಲ್ಲ. ಜನಾಭಿಪ್ರಾಯದ ಬಗ್ಗೆ ನಿಮಗೆ ಪ್ರತಿಷ್ಠೆ ಇರಬೇಕು. ಆ ಪ್ರತಿಷ್ಠೆಯಲ್ಲಿ ತಾವು ಯಶಸ್ವಿಯಾಗಿದ್ದೀರಿ. ಈಗ ಜನರ ವಿರುದ್ಧವಾದಂಥ ಕಾನೂನಿನ ಬಗ್ಗೆ ಪ್ರತಿಷ್ಠೆ ಇರಬೆ ಕೇ ಹೊರತು, ಜನರ ವಿರುದ್ಧವಾದಂಥ, ಅಪಪಾ ಚುನಾಯಿತ ಪ್ರತಿನಿಧಿಗಳಿಗೆ ವಿರುದ್ಧವಾದಂಥ ಹಾಗಿದ್ದರೆ ಕೋಅಪರೇಟೀವ್ ಆಕ್ಟ್ ಅನ್ನೇ ಶ್ರೀಮಾನ್ ಬಸವಲಿಂಗಪ್ಪನವರ ಪ್ರತಿಷ್ಠೆಗಾಗಿ ಏಜಾ

ಮಾಡಿಬಿಡಿ. ಇದಕ್ಕೆ ಒಂದು ತನಿಖೆಯಾಗಲಿ. ೩೦ ಎಕರೆ ಜಮೀನನ್ನು ಮುಳಗಿಸಿದ್ದಾರೆ. ಇದು ನಿಮ್ಮ ಇಲಾಖೆಗೆ ಸೇರಿದೆ. ಈ ಬಗ್ಗೆ ತನಿಖೆಯಾಗಲಿ. ಮತ್ತು ಈ ಇಲಾಖೆಯ ಬಗ್ಗೆ ನಾನು ಹೇಳುವಾಗ ನೀವು ಏನು ಹೇಳಿದಿರಿ, ಅವ್ಯವಹಾರ ಹಾಸನ ಜಿಲ್ಲೆಯಲ್ಲಿ ನಡೆದಿದೆ ಎಂದು, ಆ ರೀತಿ ನಡೆದಿದ್ದರೆ ತನಿಖೆ ಮಾಡಿಸಿ ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ೧ ಕೋಟಿ ಇಪ್ಪತ್ತೊಂಭತ್ತು ಲಕ್ಷ ರೂಪಾಯಿ ಲಾಭ ಬಂದಿರತಕ್ಕಂಥದ್ದರಲ್ಲಿ ಏನು ಅವ್ಯವಹಾರ ನಡೆದಿತ್ತು. ಇದು ಮೊದಲು ತನಿಖೆ ಆಗಬೇಕು. ಆಡಿಟ್ ಆಗದಿದ್ದರೆ ಆಡಿಟ್ ಮಾಡಿಸತಕ್ಕಂಥ ಕೆಲಸ ನಿಮ್ಮದು. ಆದರೆ ನಿಮಗೆ ಅಧಿಕಾರ ಇಲ್ಲದಿರುವ ಕಡೆ, ನಿಮಗೆ ಅಧಿಕಾರವೇ ಇಲ್ಲವೆಂದು ಕೋರ್ಟ್ ಹೇಳಿದೆ. ಕೋರ್ಟ್ ಹೇಳಿದ್ದರ ಮೇಲೂ ನಿಮಗೆ ಪ್ರತಿಷ್ಠೆ ಇದ್ದರೆ, ಮಾಡಿ. ಆದರೆ ನೀವು ಶಾಸನ ವಿೂರಿ ಹೋಗಿದ್ದೀರಿ ಎನ್ನುವುದಕ್ಕೆ ಕೋರ್ಟ್ ಸ್ಟೇ ಆರ್ಡರ್ ಕೊಟ್ಟಿದೆ. ಕೋರ್ಟ್ ಸ್ಟೇ ಆರ್ಡರ್ ಕೊಟ್ಟ ಮೇಲೆ, ೨೨ನೇ ಮೇ ಗೆ ಮತ್ತು ೩೨ನೇ ಜೂನ್‌ಗೆ ನೀವು ಮಾಡಿದ ಎರಡೂ ಆಜ್ಞೆಗಳು ರದ್ದಾದವು ಹೀಗಿದ್ದರೂ ಕೂಡ ನಿಮ್ಮ ಪ್ರತಿಷ್ಠೆ ಗೋಸ್ಕರ ಮಾಡುತ್ತೇವೆಂದರೆ, ಆ ಪ್ರತಿಷ್ಠೆಗೆ ಉತ್ತರವನ್ನು ಬೇರೆ ಕಡೆ ನಾನು ಉತ್ತರ ಕೊಡುತ್ತೇನೆ. ಈ ಪ್ರತಿಷ್ಠೆ ಬಗ್ಗೆ ನಾವು ಚರ್ಚೆ ಮಾಡುತ್ತಿಲ್ಲ. ಸ್ವಾಮಿ ತಾವು ಅಲ್ಲಿ ೧೨೦ ಜನ ನೌಕರರು ಇದ್ದಾರೆ, ಇದರಲ್ಲಿ ೬೦೦ಜನ ೭೦೦ಜನರನ್ನು ರಿಟ್ರೆಂಜ್ ಮಾಡುತ್ತೇವೆಂದು ಹೇಳಿದ್ದೀರಿ. ಮಾಡಿ ನೋಡೋಣ ? ನಿಮಗೆ ತಾಕತ್ತಿದ್ದರೆ ಮಾಡಿ ನೋಡೋಣ. ಯಾವ ಯಾವ ರೂಪದಲ್ಲಿ ನೀವು ಮಾಡಬೇಕೆಂದ್ದೀರಿ, ಅದನ್ನು ನೀವು ಮಾಡಿ ?

ಶ್ರೀ ಬಿ. ಬಸವಲಿಂಗಪ್ಪ. —ನಾನು ಹೇಳಿದ್ದೇನೆಂದರೆ, ಜಾಸ್ತಿಯಾಗಿ ೬೦೦ಜನ ಇದ್ದಾರೆ, ಅವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿ ಅವರಿಗೂ ಕೂಡ ಒಂದು ಅವಕಾಶವನ್ನು ಮಾಡಿಕೊಡಬೇಕು, ಅದಕ್ಕೆ ನಮಗೆ...

ಶ್ರೀ ಡಿ. ಬಿ. ಚಂದ್ರೇಗೌಡ. —ನಿಮಗೆ ಅಧಿಕಾರ ಇದ್ದರೆ ಮಾಡಿ ಆದರೆ ಅಧಿಕಾರ ಇಲ್ಲದಂಥ ಕಡೆ ಏತಕ್ಕೆ ಮಾಡುವುದಕ್ಕೆ ಹೋಗುತ್ತೀರಿ. ಸಹಕಾರಿ ಸಂಸ್ಥೆಗಳಲ್ಲಿ ಏತಕ್ಕೆ ನೀವು ತಲೆ ಹಾಕುತ್ತೀರಿ. ಪ್ರತಿಷ್ಠೆ ನಿಮಗೆ ಏನಿದೆ ? ಸುಮಾರು ೫೦ ಲಕ್ಷ ಜನ ಬೆಂಗಳೂರಿನ ನಾಗರೀಕರಿದ್ದಾರೆ. ಬೆಂಗಳೂರು ಸುತ್ತಮುತ್ತಲೂ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ೫೦ ಲಕ್ಷ ಜನ ರೈತರಿದ್ದಾರೆ. ಆ ೫೦ ಲಕ್ಷ ಜನ ರೈತರು ಹಾಲು ತಂದು ಇಲ್ಲಿ ಮಾರುತ್ತಿದ್ದಾರೆ. ಬೆಂಗಳೂರು ಡೈರಿಯನ್ನು ಸರಿಯಾಗಿ ನಡೆಸಿಕೊಂಡು ಹೋಗುತ್ತಿಲ್ಲವೆನ್ನತಕ್ಕಂಥ ದೂರು ಏನಾದರು ನಿಮಗೆ ಬಂದಿದೆಯೇ ? ಈಗ ನಿಮಗೆ ಹಾಸನ ಡೈರಿ ಬಗ್ಗೆ ದೂರು ಬಂದಿದೆ. ತನಿಖೆ ಮಾಡಿ. ಆದರೆ ಬೆಂಗಳೂರು ಡೈರಿ ಬಗ್ಗೆ ದೂರು ಯಾರು ಕೊಟ್ಟಿದ್ದರು ? ದೂರು ಇರತಕ್ಕಂಥ ಹಾಸನ ಡೈರಿಗೆ ಕೈಹಾಕುವುದಿಲ್ಲ, ಆದರೆ ಇಲ್ಲಿ ಏತಕ್ಕೆ ಕೈ ಹಾಕುತ್ತೀರಿ ? ಹಾಗಾದರೆ ಏನೋ ಆಸಕ್ತಿ ಇದೆ. ನಿಮ್ಮಿದು ಏನೋ ಪ್ರತಿಷ್ಠೆ ಇದೆ. ನಿಮ್ಮ ಪ್ರತಿಷ್ಠೆಗಾಗಿ ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ ಕುಳಿತಿಲ್ಲ. ನಿಮಗೆ ಅಧಿಕಾರವಿಲ್ಲದ ವರ್ಗಾವಣೆಯನ್ನು ಏತಕ್ಕೆ ಮಾಡಿದ್ದೀರಿ ? ಆ ಮೇಲೆ ಅಲ್ಲಿನ ಅಧ್ಯಕ್ಷರನ್ನು ನಾನೇನು ಅಧ್ಯಕ್ಷರೆಂದು ಹೇಳಲಿಲ್ಲ. ಈಗ ತಾವು ಹಾಕಿರತಕ್ಕಂಥ ಮ್ಯಾನೇಜಿಂಗ್ ಡೈರೆಕ್ಟರ್‌ರವರನ್ನು ಅಧ್ಯಕ್ಷರೆಂದು ನಾನು ಹೇಳಲಿಲ್ಲ. ಆದರೆ ಆವರ ಮೇಲೆ ಚಾಜಸ್ ಇದ್ದರೂ ಸಹ ಅವರು ಪ್ರಾಮಾಣಿಕರೆಂದು ಹೇಳಿದ್ದೀರಿ. ನೀವು ರಾಜ್ಯದ ಒಬ್ಬ ಮಂತ್ರಿಯಾಗಿ ಇಲ್ಲಿ ಸರ್ಟಿಫಿಕೇಟ್ ಕೊಟ್ಟು ಬಿಟ್ಟರೆ ಮುಂದೆ ನಾನು ಯಾರ ಜೊತೆಗೆ ವಿಚಾರಿಸಬೇಕು. ನಾವು ಮಾಡಿದ ಚಾರ್ಜ್‌ಗಳನ್ನು ಯಾರ ಮುಂದೆ ಹೇಳಬೇಕು. ಈಗ ನೀವು ಸರ್ಟಿಫಿಕೇಟ್ ಕೊಟ್ಟಾಯಿತು. ಯಾವ ಕೇಪರೇಟೀವ್ ಯೂನಿಯನ್ ಇದೆ, ಆ ಯೂನಿಯನ್ ಮಾಡಿರತಕ್ಕಂಥ ತೀರ್ಮಾನದ ವಿರುದ್ಧ ಬೇರೆ ೫ ಬ್ಯಾಂಕ್‌ಗಳಲ್ಲಿ ದುಡ್ಡನ್ನು ಇಟ್ಟಿದ್ದಾರೆಂದರೆ, ಏತಕ್ಕೆ ಇಡಬಾರದೆಂದು ತಾವು ಕೇಳಿದರೆ ಏನು ಹೇಳಬೇಕು ? ನನಗೆ ಗೊತ್ತಿರತಕ್ಕಂಥ ವಸ್ತು ಸ್ಥಿತಿ ಏನು ? ಈಗಿರತಕ್ಕಂಥ ವ್ಯವಸ್ಥೆಯಲ್ಲಿ ನಾವು ಚುನಾಯಿತ ಸಭೆಯನ್ನು ನಡೆಸುತ್ತಿದ್ದೇವೆ. ನೀವುಗಿರೀಜನ ಕುಳಿತು ತೀರ್ಮಾನ ಮಾಡುತ್ತೀರಿ. ನಮ್ಮ ವಿರುದ್ಧ ತಾವು ಹೋಗುತ್ತಿರೆಂದರೆ, ನಾವು ಎಲ್ಲಿಗೆ ಹೋಗಬೇಕು. ಅದೇ ರೀತಿ ಸಹಕಾರಿ ಸಂಸ್ಥೆಗಳಲ್ಲಿ ಚುನಾಯಿತ ಪ್ರತಿನಿಧಿಗಳು ಇರುತ್ತಾರೆ, ಯೂನಿಯನ್‌ಗಳಿವೆ, ಕ್ರಮಬದ್ಧವಾಗಿ ಶಾಸನಬದ್ಧವಾಗಿ ಆಯ್ಕೆಯಾಗಿ ಬಂದಿರುತ್ತಾರೆ. ಅವರು ಮಾಡಿರತಕ್ಕ ಕೆಲವು ತೀರ್ಮಾನದ ವಿರುದ್ಧವಾಗಿ ನಾನು ಪ್ರವೇಶ ಮಾಡುತ್ತೇನೆಂದರೆ ಯಾವ ಆಧಾರದ ಮೇಲೆ ನೀವು ಪ್ರವೇಶ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ಇಲ್ಲಿ ಸ್ವೇಚ್ಛಾವೃತ್ತಿ ಯಾರದ್ದು ? ಇಪ್ಪತ್ತು ವರ್ಷಗಳವರೆಗೆ ಮಿಲ್ಕ್ ಯೂನಿಯನ್ ಕಟ್ಟಿ ೮೭ ಕೋಟಿ ರೂಪಾಯಿ ವ್ಯವಹಾರ ಮಾಡಿದರಲ್ಲ, ಅವರದ್ದು ಸ್ವೇಚ್ಛಾವೃತ್ತಿ ನೀವು ಮಂತ್ರಿಯಾಗಿ ಬಂದ ಮೇಲೆ ಮ್ಯಾನೆಜಿಂಗ್ ಡೈರೆಕ್ಟರ್ ಹಾಕುವುದು ಬಹಳ ಸಂಪ್ರದ್ಧಿ ಯಾದ ವೃತ್ತಿ, ಯಾವುದು ಸ್ವೇಚ್ಛಾವೃತ್ತಿ ? ಕಳೆದ ೧೬ ವರ್ಷಗಳಿಂದ ಈ ಬೆಂಗಳೂರಿನ ಮಿಲ್ಕ್ ಯೂನಿಯನ್ ಕಟ್ಟುವುದಕ್ಕೆ ಬಹಳ ಜನ ಹೋರಗಡೆ ನುಡಿದಿದ್ದಾರೆ.

ಅವರಿಗೆ ಪ್ರತಿಷ್ಠೆ ಇಲ್ಲವೆ ? ನಿಮಗೆ ಮಾತ್ರ ಇದೆ ಏನು ? ಪ್ರತಿಷ್ಠೆ, ಸಂಸ್ಥೆ ಕಟ್ಟಿದವರಿಗೆ ಹೆಚ್ಚು ಇರುತ್ತದೋ ಅಥವಾ ಮಂತ್ರಿ ಆದತಕ್ಷಣ ನಾವು ಅಧಿಕಾರ ಚಲಾಯಿಸುವುದರಲ್ಲಿ ಪ್ರತಿಷ್ಠೆ ಹೆಚ್ಚೋ ? ಇಂತಹ ಪ್ರವೃತ್ತಿಯನ್ನು ಪ್ರತಿಭಟಿಸದೆ ಬೇರೆ ಮಾರ್ಗವೇ ಇಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರಲ್ಲಿ ಪ್ರಾರ್ಥಿಸುತ್ತೇನೆ, ಇದರ ಬಗ್ಗೆ ಸಮಗ್ರವಾದ ತನಿಖೆಯಾಗಲಿ. ನಾನು ಅಪರಾಧ ಮಾಡಿದ್ದರೆ ನಾನು ಶಿಕ್ಷೆಗೆ ಒಳಗಾಗುತ್ತೇನೆ. ಅಲ್ಲಿ ನಡೆಯುವ ವ್ಯವಹಾರವನ್ನು ತಮ್ಮ ಮೂಲಕ ಶಾಸನ ಸಭೆಗೆ, ಈ ಶಾಸನ ಸಭೆಯ ಮುಖಾಂತರ ಕರ್ನಾಟಕ ರಾಜ್ಯದ ನಾಗರೀಕರಿಗೆ ಇದನ್ನು ಹೇಳಬೇಕಾಗಿದೆ. ಇಲ್ಲಿ ಯಾರದೋ ಪ್ರತಿಷ್ಠೆ ಬಗ್ಗೆ ಚರ್ಚೆ ಆಗುವುದಾದರೆ ಪ್ರತಿಷ್ಠೆ ಚುನಾಯಿತ ಸಭೆಗಳದ್ದು, ಚುನಾಯಿತ ಪ್ರತಿನಿಧಿಗಳದ್ದು, ಮತ್ತು ಶಾಸನಬದ್ಧವಾದ ಅಧಿಕಾರ ಇರತಕ್ಕಂಥ ಸಂಸ್ಥೆಗಳ ಪ್ರತಿಷ್ಠೆ ಇರಬೇಕೆ ಹೊರತು ಇಲ್ಲಿ ವ್ಯಕ್ತಿಯ ಪ್ರತಿಷ್ಠೆ ಇರಕೂಡದು. ಇಂತಹ ಪ್ರತಿಷ್ಠೆಯನ್ನು ನಾನು ಪ್ರತಿಭಟಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀಮಾನ್ ಚಂದ್ರೇಗೌಡರು ನನಗೆ ಸಣ್ಣ ಹುಡುಗರು ಇದ್ದಾಗಿನಿಂದಲೂ ಗೊತ್ತು.

ಶ್ರೀ ಎಸ್. ಹೆಚ್. ಕೌಜಲಗಿ.—ಮಾನ್ಯ ಮಂತ್ರಿಗಳು ವಿಷಯವನ್ನು ಡೈವರ್ಟ್ ಮಾಡುತ್ತಿದ್ದಾರೆ

ಶ್ರೀ ಬಿ. ಬಸವಲಿಂಗಪ್ಪ.—ನನ್ನ ಅವರ ಸಂಬಂಧ ನಿಮಗೆ ಏನು ಗೊತ್ತು ? ಎಂದೆಂದೂ ನನ್ನ ಕಿವಿಯಲ್ಲಿ ಅವರ ಮಾತನ್ನು ಕೇಳಿಲ್ಲ. ರೆಲ್ವೆನ್ಸಿ ಆನ್ಸುತ್ತಾರಲ್ಲ ಯಾವುದು ಸರಿ ಯಾವುದು ಅಲ್ಲ ಎಂಬುದನ್ನು ಅವರು ರೆಲವೆನ್ಸಿ ಬಿಟ್ಟು ಮಾತನಾಡಿದ್ದನ್ನು ನಾನು ಎಂದೂ ಸಹ ಕೇಳಿಲ್ಲ. ಅವರು ಇಂದು ಹೇಳಿದಾಗ ನನಗೆ ಆತಂಕ ಇಲ್ಲ. ಆದರೆ ಇವತ್ತು ಏಕೋ, ದಾರಿ ಬಿಟ್ಟು ಮಾತನಾಡಿದ್ದೇ ಮಾತ ನಾಡಿದ್ದು. ನಾನು ಹೇಳಿದ್ದನ್ನೇ ಒಂದು ತರಹ ತಿರುಗಿಸಿಕೊಂಡು ಮಾತನಾಡಿದರು.

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮ್ಮ ಪರವಾಗಿ ಮಾತನಾಡಿದರೆ ದಾರಿ ಸರಿ. ನಿಮಗೆ ಅನಾನೂಕೂಲವಾಗಿ, ಸಂಸತ್ತಿನ ಪರವಾಗಿ, ಶಾಸನಬದ್ಧವಾಗಿ ಮಾತನಾಡಿದರೆ ದಾರಿ ಬಿಟ್ಟು ಹೋಗಿದ್ದೇನೆಂದು ಹೇಳುವುದು. ಈ ೩೦ ಕೋಟಿ ರೂಪಾಯಿನ ವ್ಯವಹಾರ ಇದೆಯಲ್ಲ, ನಿಮ್ಮ ಆಸ್ತಿಯನ್ನು ಮನೆ ಕಟ್ಟಿಕೊಳ್ಳಲು ಬಿಸಾಕಿದ್ದೀರಲ್ಲ, ಅದನ್ನು ವಿಚಾರಣೆ ಮಾಡಿಸಿ, ಯಾರ್ಯಾರ ಕೈವಾಡ ಇದೆ ಎಂದು ಗೊತ್ತಾಗುತ್ತದೆ.

ಶ್ರೀ ಬಿ ಹೆಚ್. ಬನ್ನೀಕೋಡ್.—ವಿಚಾರಣೆ ಮಾಡಿಸಿ ಆನ್ಸುತ್ತಾರೆ, ಅದನ್ನು ದಯಮಾಡಿ ಒಪ್ಪಿಕೊಳ್ಳಿ. ಇರುವ ವಿಚಾರ ಜನತೆಗೆ ಗೊತ್ತಾಗಲಿ, ಸದನಕ್ಕೆ ಗೊತ್ತಾಗಲಿ, ವಿಚಾರಣೆ ಮಾಡಿಸಿ.

ಶ್ರೀ ಬಿ. ಬಸವಲಿಂಗಪ್ಪ.—೩೦ ಎಕರೆ ಜಮೀನಿನ ಬಗ್ಗೆ ಮಾತನಾಡಿದ್ದಾರೆ. ಅವರು ಹೇಳಿದ್ದು ನಿಜ ೩–೪ ತಿಂಗಳ ಹಿಂದೆ ನನ್ನ ಗಮನಕ್ಕೆ ಬಂದಿದೆ. ಬಿಡಿಎ ಅಧಿಕಾರಿಗಳನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಮಾತನಾಡಿದ್ದಾರೆ. ನಿರ್ಣಯ ನಾವು ಮಾಡಿಲ್ಲ. ಕೆಎಂಎಫ್‌ನವರು ಅಕ್ವೈಸ್ಟರ್ ಮಾಡಿದ್ದು ನಿಜ. ನಾಗಶೆಟ್ಟಿಹಳ್ಳಿಯಲ್ಲಿ ಜಮೀನು ಇರುವುದು ನಿಜ. ಅದು ಸರ್ಕಾರದ ಆಸ್ತಿ ಅದನ್ನು ಬಿಡಿಎ. ಮುಖಾಂತರವೋ ಅಥವಾ ಯಾವರೀತಿ ವಿಲೇವಾರಿ ಮಾಡಬೇಕೆಂದು ಇನ್ನೂ ತೀರ್ಮಾನ ಮಾಡಿಲ್ಲ, ಅದು ಎಲ್ಲಿಯೂ ಹೋಗಿಲ್ಲ. ಅಲ್ಲೇ ಇದೆ. ಬೇರೆ ಯವರು ಅಲ್ಲಿ ಮನೆ ಕಟ್ಟಿಸಿದ್ದರೆ ಮತ್ತು ಗುಡಿಸಲು ಹಾಕಿಸಿದ್ದಾರೆಂದು ಹೇಳಿದರು. ಅವನ್ನು ಕಿತ್ತುಹಾಕಲಿಕ್ಕೆ ಸಾಧ್ಯ ಆದರ ಬಗ್ಗೆ ತಾವು ಚಿಂತೆ ಮಾಡಬೇಡಿ ಜಮೀನು ಮಾತ್ರ ಇದೆ. ಏನೇನು ಮಾಡಿದ್ದಾರೋ ನೋಡೋಣ. ಆನ್‌ಆಥರೈಸ್ಡ್ ಕನಸ್ಟ್ರಕ್ಷನ್ ಅಲ್ಲಿ ಬಂದಿದೆ ಎಂದು ಕೇಳಿದ್ದೇನೆ. ನಾನು ಹೋಗಿ ನೋಡಿಲ್ಲ. ನನ್ನ ಕ್ಷೇತ್ರವಾದರೂ ನೋಡುವುದಕ್ಕೆ ಆಗಿಲ್ಲ. ವಿಲೇವಾರಿ ಆಂತೂ ಆಗಿಲ್ಲ, ಅದು ಹಾಗೆಯೇ ಇದೆ. ಈಗ ಚಂದ್ರೇಗೌಡರು ಏನೆ ನು ವಾದಯನ್ನು ಈ ಸದನದಲ್ಲಿ ಇಟ್ಟಿದ್ದಾರೆ ಅದು ಆಧಾರರಹಿತವಾದುದು, ಏನೇನು ಕೆಲಸ ಮಾಡಿದರೂ ನಾನು ಕಾನೂನು ರೀತ್ಯಾ ಮಾಡುತ್ತೇನೆಯೇ. ವಿನಹ ಕಾನೂನು ಬಿಟ್ಟು ಹೋಗುವುದಿಲ್ಲ. ಕಾನೂನು ರೀತ್ಯಾ ಮಾಡುವುದಿಲ್ಲ ಅಂದರೆ ಸೆಕ್ಷನ್ ೫೫ರ ಪ್ರಕಾರ ಏತಕ್ಕೆ ನೋಟಿಫಿಕೇಷನ್ ಮಾಡುತ್ತಿದ್ದೆ,

ಶ್ರೀ ಡಿ. ಬಿ. ಚಂದ್ರೇಗೌಡ.—ಅಧಿಕಾರ ಇಲ್ಲವೆಂದು ಗೊತ್ತಾಯಿತು, ತೆಗೆದುಕೊಳ್ಳಬೇಕಾಯಿತು ಮಾಡಿದಿರಿ.

ಶ್ರೀ ಬಿ. ಬಸವಲಿಂಗಪ್ಪ.—ಅಧಿಕಾರ ತೆಗೆದುಕೊಂಡು ಮಾಡೋಣವೆಂದು ಮಾಡಿದೆ. ಅದು ತಮಗೆ ಸಿಟ್ಟಾಗಿದೆ. ನಾನು ಕಾನೂನು ಪ್ರಕಾರ ಮಾಡುತ್ತೇನೆ, ನಾನು ಕಾನೂನು ಬಿಟ್ಟು ಮಾಡುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನಾನು ಇದರ ಬಗ್ಗೆ ಸವಿಸ್ತಾರವಾಗಿ ಮಾತನಾಡಬೇಕೆಂದು ಇದೆ. ಆದರೆ ಆ ಸಂದರ್ಭ ಒದಗಿಬರಲಿಲ್ಲ. ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರು ಬಹಳ ಬುದ್ಧಿವಂತರು. ಅವರ ಕಡೆ ತಪ್ಪಾಗಿದೆ ಎಂದು ಅವರಿಗೆ ಮನವರಿಕೆಯಾಗಿದೆ. ಅವರು ಹೇಳತಕ್ಕ ಉತ್ತರ ಏನಿದೆ. ಅದು ಸಮಂಜಸ ಅಲ್ಲವೆಂದು ಅವರಿಗೂ ಗೊತ್ತಿದೆ. ಆದರಿಂದಲೇ ನಗುನಗುತ್ತಾ ನಮ್ಮ ದಾರಿ ತಪ್ಪಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅವರು ನಗುತ್ತಾ ಇರುವುದನ್ನು ನೋಡಿದರೆ ಅವರು ತಪ್ಪಿಸಿಕೊಂಡು ಹೋಗುವ ದಾರಿ ಹುಡುಕುತ್ತಿದ್ದಾರೆ. ನನಗೂ ಚಂದ್ರೇಗೌಡರಿಗೂ ಹತ್ತಿರದ ಸಂಬಂಧ, ಅವರು ನನಗೆ ಬಹಳ ದಿನಗಳಿಂದ ಗೊತ್ತು. ನಿಮಗೆ ಏನು ಗೊತ್ತು ಅನ್ನುವುದು, ಇದಾದಮೇಲೆ ಮಿಲ್ಕ್ ಫೆಡರೇಷನ್ ೪೦ ವರ್ಷಗಳಿಂದ ನಡೆದು ಬಂದಿದೆ ಎಂದು ನೀವು ಮಂತ್ರಿಯಾಗಿ ೬ ತಿಂಗಳಾಯಿತು. ಆದರೆ ನಾವೂ ಸರ್ಕಾರವನ್ನು ಆರೂವರೆ ವರ್ಷ ನಡೆಸಿದ್ದೇವೆ. ನಾವೂ ಕೆ.ಎಂ.ಎಫ್ ಬಗ್ಗೆ ತಿಳಿದುಕೊಂಡಿದ್ದೇವೆ. ಇಲ್ಲಿ ಮುಖ್ಯವಾಗಿ ಬಂದಿರತಕ್ಕ ಪ್ರಶ್ನೆ ಇಷ್ಟೆ., ನೋಟೀಸ್ ಏನು ಅವರು ಕೊಟ್ಟಿದ್ದಾರೆ, ನೋಟೀಸ್ ಕೊಟ್ಟಮೇಲೆ ಅಲ್ಲಿ ಒಂದು ವರ್ಗದ ಕಾರ್ಮಿಕರಿಗೆ ಹೆರಾಸ್‌ಮೆಂಟ್ ಆಗುತ್ತಿದೆ. ಈ ಸದನದಲ್ಲಿ ಕುಳಿತುಕೊಂಡು ಜವಾಬ್ದಾರಿಯಲ್ಲಿರತಕ್ಕ ವಿರೋಧಪಕ್ಷದ ನಾಯಕರು ಮತ್ತು ಇತರ ಸದಸ್ಯರು ಅವರ ಮೇಲೆ ಛಾರ್ಜಸ್ ಮಾಡುತ್ತಿದ್ದಾರೆ, ಆದರೆ ನನಗೆ ಗೊತ್ತಿದೆ. ಎಂದು ನೀವು ಅವರಿಗೆ ಸರ್ಟಿಫಿಕೇಟ್ ಕೊಟ್ಟಿದ್ದೀರಿ. ಎಷ್ಟು ದಿವಸದಿಂದ ನಿಮಗೆ ಅವರು ಗೊತ್ತು ? ನೀವು ಮಂತ್ರಿಗಳಾಗಿ ಆರು ತಿಂಗಳಾಯಿತು. ಹಾಗಿದ್ದರೆ ನನ್ನ ಮಾತೂ ನಂಬಿ ನಾನೂ ಏಳು ವರ್ಷ ಮಂತ್ರಿಯಾಗಿದ್ದೆನಲ್ಲ. ನನಗೂ ಕೆ.ಎಂ.ಎಫ್. ವಿಚಾರ ಗೊತ್ತಿದೆಯಲ್ಲ. ನಾನೂ ಹಾಲು ಉತ್ಪಾದನೆ ಮಾಡತಕ್ಕವನು. ನೀವು ನನ್ನ ಮಾತು ಏತಕ್ಕೆ ಕೇಳಬಾರದು ? ಇದು ಬಸವಲಿಂಗಪ್ಪನವರು ಹೇಳುವ ಮಾತು, ಸಿಂಧ್ಯ ಅವರು ಹೇಳುವ ಮಾತಲ್ಲ. ನಮ್ಮ ಮುಂದೆ ಇರತಕ್ಕ ಅಂಕಿಅಂಶಗಳು ಮತ್ತು ಕಡತದ ಆಧಾರದ ಮೇಲೆ ನಾವು ಹೋಗಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ನಾಳೆ ಮಾತನಾಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾಳೆ ಏತಕ್ಕೆ ಮಾತನಾಡಬೇಕು ? ಇವತ್ತು ನನಗೆ ಉತ್ತರ ಬೇಕು. ನಾಳೆ ಡಿಮ್ಯಾಂಡ್ಸ್ ಬರುತ್ತದೆ, ನೀವು ೧೮೦ ಜನ ಇದ್ದೀರಿ. ಪಾಸ್ ಮಾಡಿಕೊಂಡು ಹೋಗುತ್ತೀರಿ. ಇವತ್ತು ಏನು ಛಾರ್ಜಸ್ ಮಾಡುತ್ತಿದ್ದೇವೆ, ಅದಕ್ಕೆ ಉತ್ತರ ಕೊಡಿ. ಮಾನ್ಯ ಅಧ್ಯಕ್ಷರೆ, ಈ ಮಿಲ್ಕ್ ಯೂನಿಯನ್ ಅಧ್ಯಕ್ಷರಾದ ಸೂರ್ಯನಾರಾಯಣ ಅವರು ಇವರಿಗೆ ಮತ್ತು ಇವರ ಇಲಾಖೆ ಕಾರ್ಯದರ್ಶಿಯವರಿಗೆ ಒಂದು ಪತ್ರ ಬರೆದಿದ್ದಾರೆ. ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಬೋರ್ಡಿನವರು ಮಾರ್ಚ್ ೧೫ ರಂದು ಪತ್ರ ಬರೆದು ಒಂದು ಕ್ಯಾನಿಗೆ ೪೫೦ ರೂಪಾಯಿನಂತೆ ೨೦೦೦ ಕ್ಯಾನ್‌ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇವತ್ತು ಈ ಅಧಿಕಾರಿ ಅಲ್ಲಿರುವ ಬೋರ್ಡ್‌ನ ವ್ಯಾಪ್ತಿಯನ್ನು ಮೀರಿ ಅವರ ತೀರ್ಮಾನವನ್ನು ಮೀರಿ, ಒಂದು, ಕ್ಯಾನ್‌ಗೆ ೪೫೦ ರೂಪಾಯಿನಂತೆ ೨ ಸಾವಿರ ಕ್ಯಾನ್‌ಗಳನ್ನು ತೆಗೆದುಕೊಳ್ಳುವ ಅಗತ್ಯ ಏನಿತ್ತು ? ಇದಕ್ಕಾ ಸರ್ಟಿಫಿಕೇಟ್ ಕೊಡುವುದು ನೀವು ? ಶ್ರೀ ಮಾನಾಕ್ಷಿ ಸುಂದರಂ ಬಗ್ಗೆ ಹೇಳಿದ್ದೀರಿ. ಮಾನಾಕ್ಷಿ ಸುಂದರಂ ಅವರು ಈ ಅಧಿಕಾರಿ ಬಗ್ಗೆ ಏನು ಬರೆದಿದ್ದಾರೆ, ಅದನ್ನು ನಾವು ಹೇಳಿ ಬರೆಸಿದ್ದೇವಾ ? ಅವರು ಕೆ.ಎಂ.ಎಫ್. ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕೊಟ್ಟಿರತಕ್ಕ ತೀರ್ಮಾನ. ಆದರ ಬಗ್ಗೆ ಉತ್ತರ ಕೊಡಬೇಕು. ಆದಕ್ಕಾಗಿ ನಾವು ಏನು ಡಿಮ್ಯಾಂಡ್ ಮಾಡುತ್ತಿದ್ದೇವೆಂದರೆ, ಇವತ್ತು, ೩೦ ಎಕರೆ ಜಮೀನಿನ ಬಗ್ಗೆ ಆಥವಾ ಕೋ-ಆಪರೇಟಿವ್ ಆಕ್ಟ್ ಬಗ್ಗೆ. ನಿಮಗಿರತಕ್ಕ ಅಧಿಕಾರದ ಬಗ್ಗೆ ಆಮೇಲೆ ಮಾತನಾಡೋಣ, ಮಿಲ್ಕ್ ಡೈರಿ ಯಾವರೀತಿ ಫಂಕ್ಷನ್ ಆಗುತ್ತದೆ ? ಆರು ತಿಂಗಳು ನಾವು ರೂರಲ್ ಡೆವಲಪ್‌ಮೆಂಟ್ ಮಂತ್ರಿಯಾಗಿದ್ದಿರಿ. ಈ ಇಲಾಖೆಯಲ್ಲಿ ಎಷ್ಟು ದಿವಸ ಇರುತ್ತೀರೋ ನನಗೆ ಗೊತ್ತಿಲ್ಲ. ೫ವೇ ಇರಿ. ಸಂತೋಷ. ನೀವು ಹೋಗಬೇಕು ಎಂದು ನಾವು ಹೇಳುವುದಿಲ್ಲ. ನೋಡಿ ಅದಕ್ಕೂ ನಗುತ್ತಿದ್ದಾರೆ.

ಶ್ರೀ ಬನ್ನಿಕೋಡ್ ಬಸಪ್ಪ.—ಸತ್ಯ ಎಂದು ಅವರಿಗೆ ಗೊತ್ತು.

ಶ್ರೀ ಎಂ. ಮಹದೇವ್.—ಬಸವಲಿಂಗಪ್ಪನವರು ಹೇಗಿರಬೇಕು ? ನಗಬೇಕೋ ಅಳಬೇಕೋ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನಿಮಗೂ ಗೊತ್ತಿದೆ, ಅದಕ್ಕೇ ಮೊಗುಂ ಆಗಿರುವುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಹಸನ್ಮುಖಿಯಾಗಿ ಮಾತನಾಡಿದರೆ ನಿಮ್ಮ ಕೋಪ ತಗ್ಗುತ್ತದೆ ಎಂದು.

ಶ್ರೀ ಡಿ. ಬಿ. ಚಂದ್ರೇಗೌಡ.—ಇದು ಹಸನ್ಮುಖ ಅಲ್ಲ, ಇದೊಂದು ತರಹ ವಿಚಿತ್ರವಾದ ಹಸನ್ಮುಖ ನೋಡಿದರೆ ಗೊತ್ತಾಗಿಬಿಡುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಬಸವಣ್ಣನವರು ಈ ಮಾನುಜರ ನೋಡಿ ನಗೆಯು ಬರುತ್ತಿದೆ ಎಂದು ಹೇಳಿದ್ದಾರೆ. ಹಾಗೆ ಇವರನ್ನು ನೋಡಿ ನನಗೆ ನಗು ಬರುತ್ತಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇವರಿಗೆ ಈ ಸ್ಥಿತಿ ಬಂದಿದೆಯಲ್ಲ ಎಂದು ನನಗೆ ನಗೆ ಬರುತ್ತಿದೆ. ಕ್ರಾಂತಿ ಮಾಡುವುದಕ್ಕೆ ಹೊರಟಿದ್ದಾರಲ್ಲ, ಅದು ಬೇಡ. ಇನ್ನೊಂದು ದಿವಸ ಆದರೂಬಗ್ಗೆ ಮಾತ ನಾಡುತ್ತೇನೆ. ನಮಗೆ ಬೇಕಾಗಿರುವುದು ಇಷ್ಟೆ. ಈ ಅಧಿಕಾರಿಯನ್ನು ಬಹಳ ದಕ್ಷರು, ಪ್ರಾಮಾಣಿಕರು ಎಂದು ಸರ್ಟಿಫಿಕೇಟ್ ಕೊಟ್ಟಿದ್ದಾರಲ್ಲ. ಅವರನ್ನು ಇದಕ್ಕಿಂತ ಉತ್ತಮವಾದ ಜಾಗಕ್ಕೆ ಹಾಕಿ. ನಮ್ಮ ತಕರಾರು ಏನೂ ಇಲ್ಲ. ಇದೆರೆ ಕೆ.ಎ.ಎಫ್. ಅನ್ನು ಹಾಳುಮಾಡುವುದು ಬೇಡ. ಅವರನ್ನು ನಿಮ್ಮ ಪ್ರೈವೇಟ್ ಸೆಕ್ರೆಟರಿಯಾಗಿ ಬೇಕಾದರೆ ಅಪಾಯಿಂಟ್ ಮಾಡಿಕೊಳ್ಳಿ. ಅವರನ್ನು ವಿಚಾರಣೆಯಾಗುವವರೆಗೆ ತೆಗೆಯಬೇಕು. ಇಲ್ಲದಿದ್ದರೆ ಏನು ಉಪಯೋಗ ?

ಶ್ರೀ ಬಿ. ಬಸವಲಿಂಗಪ್ಪ.—ಆಗುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆಗುವುದಿಲ್ಲ ಎಂದು ಹೇಳುತ್ತಾರೆ. ಇವರಿಗೆ ವಿರೋಧಪಕ್ಷದ ವರಿಗೆ ಗೌರವ ಕೊಡುವುದು ಎಲ್ಲಿ ಗೊತ್ತಿದೆ ? ನಾವು ಏತಕ್ಕೆ ಇಲ್ಲಿಗೆ ಬರಬೇಕು ? ನಾವು ಮಾತ ನಾಡುವುದಕ್ಕೆ ಆಧಾರ ಇಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—ಮುಂದಿನ ಎಲೆಕ್ಷನ್‌ನಲ್ಲಿ ನಿಂತು ಆಕಸ್ಮಾತ್ ಮೆಜಾರಿಟಿ ಬಂದರೆ ನಿಮಗೆ ಅವಕಾಶ ಸಿಗುತ್ತದೆ ಆಡಳಿತ ಮಾಡುವುದಕ್ಕೆ. ಆಗ ಮಾಡ್ರಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಷ್ಟರವರೆಗೆ ಹನುಮಂತಪ್ಪ, ತಿರುಪತಿ ನಾಮವನ್ನು ಮಿಲ್ಕ್ ಡೈರಿಗೆ ಹಾಕಿಕೊಂಡು ಹೋಗುತ್ತಾ ಇರಬಹುದು. ಇದಕ್ಕೇನು ಅರ್ಥ ಇದೆ? ಮಾನ್ಯ ಅಧ್ಯಕ್ಷರೇ, ೭೦೦ ಜನ ಕಾರ್ಮಿಕರಿಗೆ ಬೇರೆ ಕಡೆ ಕೆಲಸ ಕೊಡುತ್ತೇನೆಂದು ಮತ್ತು ಇದು ನನ್ನ ಪ್ರತಿಷ್ಠೆ ಪ್ರಶ್ನೆ ಎಂದು ಹೇಳಿದರಲ್ಲಾ.... ಇಲ್ಲಿ ಪ್ರಶ್ನೆ ಇರತಕ್ಕಂತಹದ್ದು ಆ ಹನುಮಂತಪ್ಪನ ಒಂದು ವಿಚಾರಗಳು ಏನು ಇವೆ, ಇವರು ಮಾಡಿರತಕ್ಕ ವ್ಯವಹಾರಗಳು ಏನು ಇವೆ, ಇದನ್ನು ಎಲ್ಲಿ ಎಕ್ಸ್‌ಪೋಸ್ ಮಾಡುತ್ತಾರೆಂದು ಹೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಅವರ ಹೆಸರನ್ನು ಹೇಳಬೇಡಿ

ಶ್ರೀ ಪಿ. ಜಿ. ಆರ್. ಸಿಂಧ್ಯ —ಆಯಿತು ಹಾಗಿದ್ದರೆ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಆ ಅಧಿಕಾರಿ ಎಂ. ಡಿ. ಆ ಎಂ. ಡಿ ಮಾಡಿರತಕ್ಕ ವ್ಯವಹಾರಗಳನ್ನು ಎಕ್ಸ್‌ಪೋಸ್ ಮಾಡುವುದಕ್ಕೆ ಹೊರಟಿರತಕ್ಕ ಜಿನಿಯಸ್ ಕಾರ್ಮಿಕರು ಯಾರಿ ಇದ್ದಾರೆ, ಅವರ ಮೇಲೆ ಹೆರಾಸ್‌ಮೆಂಟ್ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ. ಮೆಜಾರಿಟಿ ಇದೆಯಲ್ಲಾ...

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹೌದು, ನಿಮಗೆ ಮೆಜಾರಿಟಿ ಇದೆ. ನಿಮ್ಮ ಕೈಯಲ್ಲಿ ಸರ್ಕಾರ ಇದೆ. ಪೋಲೀಸ್‌ನವರು ಇದ್ದಾರೆ, ಎಲ್ಲ ಇದೆ. ಆದ್ದರಿಂದ ನೀವು ಹೇಳಿದ ಹಾಗೆ ಎಲ್ಲವೂ ನಡೆಯುತ್ತದೆ. ಆ ಹೆರಾಸ್‌ಮೆಂಟ್‌ನ್ನು ನಿಲ್ಲಿಸತಕ್ಕ ಆಶ್ವಾಸನೆಯನ್ನು ತಾವು ಕೊಡಬೇಕು. ಆ ಅಧಿಕಾರಿಯನ್ನು ಅಲ್ಲಿಂದ ಬೇರೆ ಕಡೆಗೆ ವರ್ಗ ಮಾಡಬೇಕು. ಆಗ ನಾನು ಹೇಳುತ್ತೇನೆ. ಏನೆಂದರೆ, ಮಾನ್ಯ ಬಸವಲಿಂಗಪ್ಪನವರಿಗೆ ಇದರಲ್ಲಿ ಯಾವುದೇ ಸೆಲ್ಫ್ ಇಂಟರೆಸ್ಟ್ ಇದರಲ್ಲಿ ಇಲ್ಲ. ಇವರಿಗೆ ಪ್ರತಿಷ್ಠೆ ಇಲ್ಲ. ಇವರು ರಾಜ್ಯದ ಜನಗಳ ಪ್ರತಿಷ್ಠೆಯಾಗಿ ಉಳಿದಿದ್ದಾರೆ ಎನ್ನತಕ್ಕ ಸರ್ಟಿಫಿಕೇಟನ್ನು ಇಡೀ ಸದನ ನಿಮಗೆ ಕೊಡುತ್ತದೆ. ಅದನ್ನು ಬಿಟ್ಟು ನೀವು ಹೇಳುವುದೆಲ್ಲಾ ಸತ್ಯ, ನಾನು ಮಾಡು ವುದಿಲ್ಲ ಅಂತ ಹೇಳಿದರೆ ಏನು ಇದು ಉತ್ತರ? ನೀವೇ ಯೋಚನೆ ಮಾಡಿ. ನಾವು ೨೪ ಜನ ಇದ್ದೇವೆ. ನೀವು ಇದ್ದೀರಲ್ಲಾ ೧೮೦ ಜನ, ನೀವು ಯೋಚನೆ ಮಾಡಿ. ಆದ್ದರಿಂದ ನಾನು ಮತ್ತೊಮ್ಮೆ ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದೇನೆ. ನಿಮ್ಮ ಹಿತದೃಷ್ಟಿಯಿಂದ ಆ ಅಧಿಕಾರಿಯನ್ನು ಅಲ್ಲಿಂದ ತೆಗೆಯಿರಿ. ಇದರ ಬಗ್ಗೆ ವಿಚಾರಣೆಗೆ ನೀವು ಅವಕಾಶ ಮಾಡಿಕೊಡಿ.

ಈ ಕಾರ್ಮಿಕರಿಗೆ ನೀವು ಏನು ನೋಪು ಕೊಡುತ್ತಿದ್ದೀರಿ, ಅವರ ಶಾಪ ನಿಮಗೆ ತಾಗುತ್ತದೆ, ದಯಮಾಡಿ ಆ ಕೆಲಸವನ್ನು ಮಾಡುವುದಕ್ಕೆ ನೀವು ಹೋಗಬೇಡಿ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಉತ್ತರ ಹೇಳಬೇಕೆ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹಾಗಾದರೆ ಇಷ್ಟರವರೆಗೆ ನಾನು ಮಾತನಾಡಿದ್ದುದು ಏಕೆ? This is the attitude of the Government. ಇವರಿಗೆ ಕನಿಷ್ಟ ಉತ್ತರವನ್ನು ಹೇಳುವ ಸೌಜನ್ಯವಾದರೂ ಇಲ್ಲವಲ್ಲ.

(ಗೊಂದಲ)

MR. SPEAKER.—Order, order

ಶ್ರೀ ಡಿ. ಬಿ. ಚಂದ್ರೇಗೌಡ.—ಹಾಗಿದ್ದರೆ ಬೇರೆ ಎಲ್ಲಾ ಚಾರ್ಜ್‌ಗಳನ್ನೂ ಬಿಟ್ಟು ಬಿಡೋಣ. ಅಕ್ಟೋಬರ್ ೧೫ನೇ ತಾರೀಖಿನಂದು ಎಸ್. ಡಿ. ಡಿ. ಬೋರ್ಡಿನವರು ಕಾಗದ ಬರೆದು ೪೩೦ ರೂ. ಗಳಿಗೆ ಒಂದು ಕ್ಯಾನನ್ನು ಕೊಡುತ್ತೇವೆ. ೨೦೦ ರಿಂದ ೩೦೦ ಕ್ಯಾನ್‌ಗಳನ್ನು ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಅದನ್ನು ಬಿಟ್ಟು ೨ ಸಾವಿರ ಕ್ಯಾನ್‌ಗಳನ್ನು ೮೨೪-೬೦ ರೂ. ಗಳಿಗೆ ತೆಗೆದುಕೊಂಡು ೧೬,೬೯,೨೮೦-೦೦ ರೂ. ಗಳನ್ನು ಲುಕ್ಷಾನು ಮಾಡಿದ್ದಾರಲ್ಲಾ, ಅದನ್ನಾದರೂ ವಿಚಾರಣೆ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ನಾಳೆ ಇದರ ಬಗ್ಗೆ ವಿವರಣೆಯನ್ನು ಕೊಡುತ್ತೇನೆ.

ಶ್ರೀ ಎಸ್. ಎಚ್. ಕೌಜಲಗಿ.—ಅದು ಏಕೆ? ಯಾರದೋ ಪಾಪವನ್ನು ನಿಮ್ಮ ಮೈಮೇಲೆ ಏಕೆ ತೆಗೆದುಕೊಳ್ಳುತ್ತಿದ್ದೀರಿ? ಆ ಅಧಿಕಾರಿಯನ್ನು ವರ್ಗ ಮಾಡುತ್ತೇನೆಂದು ಹೇಳಿಬಿಡಿ. ಆಗ ನಿಮಗೆ ಏನೂ ಆದರಲ್ಲಿ ಇಂಟ್ರೆಸ್ಟ್ ಇಲ್ಲವೆಂದು ಅರ್ಥವಾಗುತ್ತದೆ. ಸಂಶಯ ಬರುವುದು ಬೇಡ ಅಂತ ಹೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ವರ್ಗ ಮಾಡುವ ಪ್ರಶ್ನೆಯೇ ಬರುವುದಿಲ್ಲ. ನಾಳೆ ಇದರ ಬಗ್ಗೆ ವಿವರಣೆಯನ್ನು ನೀಡುತ್ತೇನೆ.

ಶ್ರೀ ಎಸ್. ಎಚ್. ಕೌಜಲಗಿ.—ಈಗಾಗಲೇ ಪ್ರೂವ್ ಆಗಿದೆ. ನಾಳೆ ಏಕೆ ಬೇಕು? ಆ ಆಫೀಸರ್ ತಪ್ಪು ಮಾಡಿದ್ದಾನೆಂದು ನಿಮ್ಮ ತಲೆಗೂ ಬಂದಿದೆ. ನಿಮ್ಮ ಮನಸ್ಸಿಗೆ ಬಂದ ಮೇಲೆ ಕ್ರಮ ತೆಗೆದುಕೊಳ್ಳಬೇಕು. ನೀವು ಬಹಳ ಗಟ್ಟಿಗರು ಇದ್ದೀರಿ ನೀವು ಯಾವುದಕ್ಕೂ ಹೆದರುವವರಲ್ಲ. ಅಷ್ಟೇ ಧೈರ್ಯಸ್ಥರು. ಆ ಆಫೀಸರ್‌ನ್ನು ಅಲ್ಲಿಂದ ತೆಗೆದುಹಾಕಿಬಿಟ್ಟರೆ ಮುಗಿದೆ ಹೋಯಿತು. ನಾಳೆ ಮತ್ತೆ ಏಕೆ?

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ತಮ್ಮಲ್ಲಿ ಇಷ್ಟೇ ಪ್ರಾರ್ಥನೆ ಮಾಡುತ್ತಿದ್ದೇನೆ. ತಮ್ಮದು ಈ ತರಹ ಪ್ರವೃತ್ತಿ ಇದ್ದರೆ, ನಾವು ಈ ಸದನದಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಒಬ್ಬೊಬ್ಬರಿಗೆ ಒಂದೊಂದು ರೀತಿಯ ಪ್ರತಿಷ್ಠೆ. ಈ ಸದನದಲ್ಲಿ ಇರುವುದಾದರೆ ನಾವು ಮಾಡುವಂತಹ ಕೆಲಸಗಳಿಗೆ ಏನೇನೂ ಅರ್ಥವಿಲ್ಲ. ನಮ್ಮ ಅಗತ್ಯವೂ ಇಲ್ಲವೆಂದು ಕಾಣುತ್ತದೆ. ಒಂದು ಸಲ ಅಂತಹ ತೀರ್ಮಾನಕ್ಕೆ ಬರಬೇಕಾಗುತ್ತದೆ. ಇಂತಹ ಪ್ರತಿಷ್ಠೆಯ ಬದಲು ಕನಿಷ್ಟ ಸಾರ್ವಜನಿಕರ ಆಸ್ತಿಯನ್ನು, ಶಾಸನ ವಿಧಾರಿ, ಚುನಾಯಿತ ಸಭೆಯನ್ನು ವಿಧಾರಿ, ಎಲ್ಲಾ ನಿಯಮಗಳನ್ನು ವಿಧಾರಿ ಕೆಲಸ ಮಾಡತಕ್ಕಂಥ ಸರ್ವಾಧಿಕಾರವನ್ನು ಮಾನ್ಯ ಮಂತ್ರಿಗಳು ಏನು ಪ್ರದರ್ಶನ ಮಾಡಿದ್ದಾರೆ, ಅದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಜನತಾ ದಳದ ಎಲ್ಲಾ ಮಾನ್ಯ ಸದಸ್ಯರು ವಿರೋಧ ಪಕ್ಷದ ನಾಯಕರ ಜೊತೆ ಸಭೆಯಿಂದ ಹೊರನಡೆದರು)

ಅಧ್ಯಕ್ಷರು.—ಈ ವಿಚಾರದ ಮೇಲೆ ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು. ಮಾನ್ಯ ಸದಸ್ಯರಿಗೆ ಈಗಾಗಲೇ ತಿಳಿಸಿರುವಂತೆ ಯೋಗ ಶಿಬಿರ ಮುಕ್ತಾಯ ಸಮಾರಂಭಕ್ಕೆ ತಾವೆಲ್ಲಾ ದಯಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಸಭೆಯನ್ನು ಮುಂದೂಡಿ ನಾಳೆ ಪ್ರಾತಃಕಾಲ ೯-೦೦ ಕ್ಕೆ ಸಭೆ ಮತ್ತೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ ೬-೨೦ ಕ್ಕೆ ಮುಂದೂಡಲ್ಪಟ್ಟು ನಾಳೆ ಅಂದರೆ ದಿನಾಂಕ ೧೨ನೇ ಜುಲೈ ೧೯೯೦ರ ಗುರುವಾರದಂದು ಬೆಳಿಗ್ಗೆ ೯-೦೦ ಗಂಟೆಗೆ ಪುನಃ ಸಮಾವೇಶಗೊಳ್ಳಲು ತೀರ್ಮಾನಿಸಿತು.)